KACD310016142014

ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ,ಹಿರಿಯೂರು .

ಉಪಸ್ಥಿತರುಃ ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು, ಚಿತ್ರದುರ್ಗ ಜಿಲ್ಲೆ.

**ಅಸಲು ದಾವಾ ಸಂಖ್ಯೆ 79/2014**

ದಿನಾಂಕಃ 02 ನೇ ಮೇ - 2026.

**ವಾದಿ** ಃ **ಶ್ರೀ.ಜಿ. ಹೇಮರೆಡ್ಡಿ,**
ಬಿನ್ ಲೇಟ್ ಉಗ್ರಪ್ಪ,
ವಯಸ್ಸು ಸುಮಾರು 86 ವರ್ಷ,
ಕೇರ್ ಆಫ್ ಎಸ್ ಎಲ್ ಆರ್ ಸ್ಟೋರ್,
ಮನೆ ನಂ.69, 2 ನೇ ಮುಖ್ಯ 4 ನೇ
ಕ್ರಾಸ್,ಶಾಂತಿನಿಕೇತನ ಶಾಲೆಯ ಹತ್ತಿರ,
ಭದ್ರಪ್ಪ ಲೇಔಟ್, ನಾಗಶೆಟ್ಟಿಹಳ್ಳಿ,
ಬೆಂಗಳೂರು - 94.

[ಪ್ರತಿನಿಧಿಸುವವರು ಶ್ರೀ ಕೆ ವಿ ಡಿ ವಕೀಲರು]

-ವಿರುದ್ಧ-

**ಪ್ರತಿವಾದಿಯರು** ಃ **1. ಲಕ್ಷ್ಮೀಪತಿಯಪ್ಪ**

SUJATHA SUVARNA B
Digitally signed by SUJATHA SUVARNA B
Date: 2026.05.06 18:24:31 +0530

ಬಿನ್ ಲೇಟ್ ಉಗ್ರಪ್ಪ, (ಮೃತರಾಗಿರುತ್ತಾರೆ
ಕಾನೂನುಬದ್ಧ ವಾರಸುದಾರರು,)
**1(ಎ)ಶ್ರೀಮತಿ ರಂಗಮ್ಮ,**
ಕೋಂ. ಲೇಟ್  ಲಕ್ಷ್ಮೀಪತಿಯಪ್ಪ,
ಮೃತಪಟ್ಟಿರುತ್ತಾರೆ.
ಕಾನೂನುಬದ್ಧ ವಾರಸುದಾರರು,

**1(ಬಿ)ಶ್ರೀಮತಿ ಧನಲಕ್ಷ್ಮೀ,**
ಬಿನ್ ಲೇಟ್. ಲಕ್ಷ್ಮೀಪತಿ,
ವಯಸ್ಸು ಸುಮಾರು 29 ವರ್ಷ,

**1(ಸಿ) ಶ್ರೀಮತಿ ನಾಗವೇಣಿ,**
ಬಿನ್ ಲೇಟ್. ಲಕ್ಷ್ಮೀಪತಿಯಪ್ಪ,
ವಯಸ್ಸು ಸುಮಾರು 30 ವರ್ಷ,
ವಾಸ ಃ ಗೊರ್ಲಡಕು ಗ್ರಾಮ,
ಕೆ ಆರ್ ಹಳ್ಳಿ ಪೋಸ್ಟ್, ಜೆಜಿ ಹಳ್ಳಿ ಹೋಬಳಿ,
ಹಿರಿಯೂರು ತಾಲ್ಲೂಕು.

ಪ್ರತಿವಾದಿ 1(ಎ) ರಿಂದ 1(ಸಿ) ರವರ ಪ್ರಸ್ತುತ ವಾಸಃ ಮನೆ ನಂ.
6, 4 ನೇ ಕ್ರಾಸ್,
ಮಂಜುನಾಥ ಫ್ಲೋರ್ ಮಿಲ್ ಮತ್ತು ದೀಪಕ್ ರೈಸ್ ಕಾರ್ನರ್
ಹತ್ತಿರ, ಲಗ್ಗೆರೆ,
ಬೈರವೇಶ್ವರನಗರ, ಬೆಂಗಳೂರು.

**1(ಡಿ) ಶ್ರೀಮತಿ ಸುಜಾತ,**
ಕೋಂ ಕರಿಯಣ್ಣ,
ವಯಸ್ಸು ಸುಮಾರು 38 ವರ್ಷ,
ವಾಸಃ ಸಂತೇಪೇಟೆ, ಅರಳಿಕಟ್ಟೆ,
ಸಿರಾ ಟೌನ್, ತುಮಕೂರು ಜಿಲ್ಲೆ.

**1(ಇ) ಶ್ರೀಮತಿ ಸುಂದರಮ್ಮ ,**
ಕೋಂ ಲೇಟ್ ನರಸಿಂಹಮೂರ್ತಿ
ವಯಸ್ಸು ಸುಮಾರು 46 ವರ್ಷ,
ವಾಸಃ ಗಜ್ಜಿಗರಹಳ್ಳಿ ಗ್ರಾಮ, ತಾವರೆಕೆರೆ ಹೋಬಳಿ, ಸಿರಾ ತಾಲೂಕು.

**2. ಶ್ರೀಮತಿ ಕೆಂಚಮ್ಮ,**
ಕೋಂ ಕರನಾಗಪ್ಪ ,
ವಯಸ್ಸು ಸುಮಾರು 55 ವರ್ಷ,
ವಾಸಃ ಗೊರ್ಲಡಕು ಗ್ರಾಮ,
ಕೆ ಆರ್ ಹಳ್ಳಿ ಪೋಸ್ಟ್, ಜೆ.ಜಿ. ಹಳ್ಳಿ ಹೋಬಳಿ,
ಹಿರಿಯೂರು ತಾಲ್ಲೂಕು.

**3. ಶ್ರೀಮತಿ ನಾಗವೇಣಿ,**
ಬಿನ್ ಲೇಟ್. ಲಕ್ಷ್ಮೀಪತಿ,
ವಯಸ್ಸು ಸುಮಾರು 27 ವರ್ಷ,
ವಾಸಃ ಗೊರ್ಲಡಕು ಗ್ರಾಮ,
ಕೆ ಆರ್ ಹಳ್ಳಿ ಪೋಸ್ಟ್, ಜೆಜಿ ಹಳ್ಳಿ ಹೋಬಳಿ,
ಹಿರಿಯೂರು ತಾಲ್ಲೂಕು.

**4. ಷಣ್ಮುಖಪ್ಪ**
ಬಿನ್ ಕರಿಯಪ್ಪ,
ವಯಸ್ಸು ಸುಮಾರು 80 ವರ್ಷ,
ವಾಸಃ ಜೆ.ಜಿ. ಹಳ್ಳಿ ಮತ್ತು ಹೋಬಳಿ,
ಹಿರಿಯೂರು ತಾಲ್ಲೂಕು.

(ಪ್ರತಿವಾದಿ 1 ಮತ್ತು 1(ಎ) ಮೃತಪಟ್ಟಿರುತ್ತಾರೆ)

(ಪ್ರತಿವಾದಿ 1(ಬಿ ಯಿಂದ ಡಿ) ರವರ ಪರ ಶ್ರೀ ಬಿ.ಎಲ್. ಎಸ್., ವಕೀಲರು)
(ಪ್ರತಿವಾದಿ 1(ಇ) ರವರ ಪರ ಶ್ರೀ ಸಿ.ಕೆ., ವಕೀಲರು)
(ಪ್ರತಿವಾದಿ 2 ರವರ ಪರ ಶ್ರೀ ಎಸ್.ಜೆ., ವಕೀಲರು)
(ಪ್ರತಿವಾದಿ 3 ರವರನ್ನು ದಿಃ 14.09.2023 ರ ಆದೇಶದಂತೆ ತೆಗೆದು ಹಾಕಲಾಗಿದೆ )
(ಪ್ರತಿವಾದಿ 4 ರವರ ಪರ ಶ್ರೀ ಟಿ.ಡಿ.ಕೆ., ವಕೀಲರು)

| | | |
|---|---|---|
| ದಾವೆ ಸ್ವರೂಪ | ಃ | ಆಸ್ತಿಯಲ್ಲಿ ವಿಭಜನೆ ಕೋರಿ |
| ದಾವೆ ಸಲ್ಲಿಸಿದ ದಿನಾಂಕ | ಃ | 27.10.2014 |
| ಸಾಕ್ಷಿಯ ವಿಚಾರಣೆ ದಿನಾಂಕ | ಃ | 20.12.2018 |
| ತೀರ್ಪು ಘೋಷಿಸಿದ ದಿನಾಂಕ | ಃ | 02.05.2026 |
| ಒಟ್ಟು ಅವಧಿ | ಃ | ವರ್ಷ ತಿಂಗಳು ದಿನಗಳು |
| | | 11 06 05 |

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

## ತೀರ್ಪು

ವಾದಿಯು ಈ ದಾವೆಯನ್ನು ಪ್ರತಿವಾದಿಯವರ ವಿರುದ್ಧ ದಾವಾಸ್ತಿಯಲ್ಲಿ ಅರ್ಧಾಂಶ ಹಿಸ್ಸೆಯನ್ನು ವಿಭಜಿಸಿ ಕೊಡಬೇಕೆಂದು ಮತ್ತು 1 ನೇ ಪ್ರತಿವಾದಿಯು 2 ಮತ್ತು 3 ನೇ ಪ್ರತಿವಾದಿಯವರಿಗೆ ಬರೆದು ಕೊಟ್ಟ ದಾಖಲಾತಿಯು ಅವರ ಹಿಸ್ಸೆಗೆ, ಹಿತಾಸಕ್ತಿಗೆ ಬಂಧನಕಾರಿಯಾಗಿರುವುದಿಲ್ಲವೆಂದು ಘೋಷಣೆ ಮಾಡಬೇಕೆಂದು ಮತ್ತು ಇತರ

ಸಂಧರ್ಬೋಚಿತ ಪರಿಹಾರ ನೀಡಬೇಕೆಂದು ಕೋರಿಕೊಂಡಿರುತ್ತಾರೆ.

2. ದಾವಾ ಶೆಡ್ಯೂಲ್ ಆಸ್ತಿಗಳ ವಿವರಗಳು ಈ ಕೆಳಕಂಡಂತಿವೆಃ–

1] ಹಿರಿಯೂರು ತಾಲ್ಲೂಕಿನ ಗೋರ್ಲಡಕು ಗ್ರಾಮದಲ್ಲಿ 4 ಎಕರೆ 8 ಗುಂಟೆ ಜಮೀನಿನ ಸರ್ವೆ ನಂ.16/1, ಇದರ ಚಕ್ಕುಬಂದಿಃ

ಪೂರ್ವಕ್ಕೆ: ಎನ್. ರಂಗಪ್ಪನವರ ಜಮೀನು
ಪಶ್ಚಿಮಕ್ಕೆ: ರಾಮಣ್ಣನವರ ಜಮೀನು
ಉತ್ತರಕ್ಕೆ: ಬಂಡಿ ವೀರಣ್ಣನ ಜಮೀನು
ದಕ್ಷಿಣಕ್ಕೆ: ಸರ್ವೆ ನಂ. 16/2 ಜಮೀನು

2] ಹಿರಿಯೂರು ತಾಲ್ಲೂಕಿನ ಗೋರ್ಲಡಕು ಗ್ರಾಮದಲ್ಲಿ 2.33 ಎಕರೆ ವಿಸ್ತೀರ್ಣದ ಸರ್ವೆ ನಂ. 16/2 ಜಮೀನು ಇದರ ಚಕ್ಕುಬಂದಿಃ

ಪೂರ್ವಕ್ಕೆ: ಪಾಂಡುರಂಗಪ್ಪನ ಜಮೀನು
ಪಶ್ಚಿಮಕ್ಕೆ: ದೊರೆಸ್ವಾಮಿ ಜಮೀನು
ಉತ್ತರಕ್ಕೆ: ಕಾಂತಮ್ಮನವರ ಜಮೀನು
ದಕ್ಷಿಣಕ್ಕೆ: ಬಂಡಿ ವೀರಣ್ಣನವರ ಜಮೀನು

3]ಹಿರಿಯೂರು ತಾಲ್ಲೂಕಿನ ಗೋರ್ಲಡಕು ಗ್ರಾಮದಲ್ಲಿ 6.14 ಎಕರೆ ವಿಸ್ತೀರ್ಣದ ಜಮೀನು ಸರ್ವೆ ನಂ. 16/3, ಇದರ ಚಕ್ಕುಬಂದಿಃ

ಪೂರ್ವಕ್ಕೆ: ಕಾಂತಣ್ಣನವರ ಜಮೀನು
ಪಶ್ಚಿಮಕ್ಕೆ: ರಂಗನಾಥನ ಜಮೀನು
ಉತ್ತರಕ್ಕೆ: ರಸ್ತೆ
ದಕ್ಷಿಣಕ್ಕೆ: ದೊರೆಸ್ವಾಮಿ ಮತ್ತು ಕೃಷ್ಣಪ್ಪ ಜಮೀನು

4] ಹಿರಿಯೂರು ತಾಲ್ಲೂಕಿನ ಜೆ. ಜಿ ಹಳ್ಳಿ ಹೋಬಳಿಯ ಗೋರ್ಲಡಕು ಗ್ರಾಮದಲ್ಲಿ 07 ಎಕರೆ 10 ಗುಂಟೆ ಅಳತೆಯ ಜಮೀನು ಹೊಂದಿರುವ ಸರ್ವೆ ನಂ. 11/2 ಅದರ ಚಕ್ಕು ಬಂದಿಃ

ಪೂರ್ವಕ್ಕೆ: ರಸ್ತೆ
ಪಶ್ಚಿಮಕ್ಕೆ: ಕರಿಯಣ್ಣ ತಂದೆ ವೀರಯ್ಯನವರಿಗೆ ಸೇರಿದ ಜಮೀನು
ಉತ್ತರಕ್ಕೆ: ಗುಂಡಲಮ್ಮನ ಜಮೀನು
ದಕ್ಷಿಣಕ್ಕೆ : ನರಸಿಂಹಮೂರ್ತಿ ತಂದೆ ರಂಗಪ್ಪನ ರವರಿಗೆ ಸೇರಿದ ಜಮೀನು

3. ದಾವಾ ಪತ್ರದ ಸಾರಾಂಶ ಈ ಕೆಳಕಂಡಂತಿರುತ್ತದೆಃ-

ವಾದಿ ಮತ್ತು ಪ್ರತಿವಾದಿ 1 ರವರು ಲೇಟ್ ಉಗ್ರಪ್ಪ ಇವರ ಮಕ್ಕಳಾಗಿದ್ದು 1(ಸಿ) ಪ್ರತಿವಾದಿಯು 1 ನೇ ಪ್ರತಿವಾದಿಯ ಮಗಳಾಗಿದ್ದು ದಾವಾ ಆಸ್ತಿಯು ಅವರ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ. ಉಗ್ರಪ್ಪ ಇವರಿಗೆ ಹೇಮರೆಡ್ಡಿ, ಕೃಷ್ಣಪ್ಪ , ಜಿ ಲಕ್ಷ್ಮೀಪತಿಯಪ್ಪ ಎನ್ನುವ ಮಕ್ಕಳಿದ್ದು ಅವರು ತೀರಿಕೊಂಡ ನಂತರ ಮೂರು ಜನ ಗಂಡು ಮಕ್ಕಳು ಉಗ್ರಪ್ಪ ಇವರ ಆಸ್ತಿಗೆ ವಾರಸುದಾರರಾಗಿರುತ್ತಾರೆ. ಉಗ್ರಪ್ಪ ಇವರ 2 ನೇ ಮಗ ಕೃಷ್ಣಪ್ಪ ಮತ್ತು ಅವರ ಹೆಂಡತಿ ತೀರಿಕೊಂಡಿದ್ದು ಅವರಿಗೆ ಯಾವುದೇ ಮಕ್ಕಳಿರುವುದಿಲ್ಲ. ಆದ್ದರಿಂದ ವಾದಿ ಮತ್ತು 1 ನೇ ಪ್ರತಿವಾದಿಯವರು, ದಾವಾ ಆಸ್ತಿಗೆ ಮಾಲೀಕರಾಗಿ ಅನುಭವಿಸಿಕೊಂಡು ಬಂದಿರುತ್ತಾರೆ.

ದಾವಾ ಐಟಂ ನಂ.2 ರ ಆಸ್ತಿಯು ಹೊಟ್ಟೆ ಕರಿಯಪ್ಪ ಇವರ ಆಸ್ತಿಯಾಗಿದ್ದು ಹೊಟ್ಟೆ ಕರಿಯಪ್ಪ ಇವರಿಗೆ ಯಾವುದೇ ಮಕ್ಕಳಿರುವುದಿಲ್ಲ ಅವರು ತೀರಿಕೊಂಡ ನಂತರ ವಾದಿ ಮತ್ತು 2 ನೇ ಪ್ರತಿವಾದಿಯವರು ಆ ಆಸ್ತಿಗೆ ವಾರಸುದಾರರಾಗಿರುತ್ತಾರೆ, ಅಂದಿನಿಂದ ಅವರು ದಾವಾ ಆಸ್ತಿಯಲ್ಲಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ. ಹೀಗಿರುವಾಗ 1 ನೇ ಪ್ರತಿವಾದಿಯು ಕಂದಾಯ ಅಧಿಕಾರಿಗಳೊಂದಿಗೆ ಸೇರಿಕೊಂಡು ಅವರ ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ. 1992 ರಲ್ಲಿ ವಾದಿಗೆ 1 ನೇ ಪ್ರತಿವಾದಿಯ ನಡುವಳಿಕೆಯಲ್ಲಿ ಬದಲಾವಣೆ ಕಂಡು ಬಂದಿದ್ದು ಸಂಶಯ ಬಂದು, ದಾಖಲಾತಿಗಳನ್ನು

ಪರಿಶೀಲಿಸಿದಾಗ ಅವರಿಗೆ ಎಲ್ಲಾ ಆಸ್ತಿಗಳ ದಾಖಲಾತಿಗಳಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಜವನಗೊಂಡನಹಳ್ಳಿಯ ನಾಡಕಛೇರಿಯಲ್ಲಿ ಉಪ ತಹಶೀಲ್ದಾರ್ ರವರ ಸಿ.ಆರ್.ನಂ. 3/1991-92 ರ ಆದೇಶದಂತೆ ಬದಲಾವಣೆ ಆಗಿರುವುದು ಕಂಡು ಬಂದಿರುತ್ತದೆ. ಅವರು ಕೂಡಲೇ ಚಿತ್ರದುರ್ಗದಲ್ಲಿ ಉಪ ವಿಭಾಗಾಧಿಕಾರಿಗಳವರ ನ್ಯಾಯಾಲಯದಲ್ಲಿ ಆರ್.ಎ. ನಂ.63/1992-93 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು ಆ ಮೇಲ್ಮನವಿಯಲ್ಲಿ Cr.No.3/1991-92 ರಲ್ಲಿ ದಿನಾಂಕ 09.10.1992 ರಂದು ಘೋಷಿಸಿದ ಆದೇಶವನ್ನು ತಳ್ಳಿ ಹಾಕಿ ತಹಶೀಲ್ದಾರ್ ಇವರಿಗೆ ಲ್ಯಾಂಡ್ ರೆವಿನ್ಯೂ ಕಾಯ್ದೆಯಡಿಯಲ್ಲಿ ಪ್ರಕರಣವನ್ನು ಕೈಗೆತ್ತಿಕೊಂಡು 3 ತಿಂಗಳೊಳಗೆ ಅರ್ಜಿಯನ್ನು ವಿಲೇವಾರಿ ಮಾಡಬೇಕೆಂದು ಆದೇಶ ಮಾಡಿರುತ್ತಾರೆ.

ವಾದಿ 1 ನೇ ಪ್ರತಿವಾದಿಯ ಬಳಿ ವಿಭಜನೆ ಮಾಡಿ ಅವರ ಹಿಸ್ಸೆಯನ್ನು ನೀಡಬೇಕೆಂದು ಕೋರಿಕೊಂಡಿದ್ದು ಆದರೆ 1 ನೇ ಪ್ರತಿವಾದಿಯು ಮುಂದೂಡುತ್ತಾ ಬಂದು ಅಂತಿಮವಾಗಿ ತಿರಸ್ಕರಿಸಿರುತ್ತಾರೆ. ಆಗ ವಾದಿಯು ತಹಶೀಲ್ದಾರವರ ಕಛೇರಿಗೆ ಹೋಗಿ ದಾಖಲಾತಿಗಳನ್ನು ಪಡೆದು ಕೊಂಡ ನಂತರ ಅವರಿಗೆ 1 ನೇ ಪ್ರತಿವಾದಿ ಮತ್ತು ಅವರ ಮಗ ನರಸಿಂಹಮೂರ್ತಿ ಇವರು 3 ಎಕರೆ 14 ಗುಂಟೆ ಸರ್ವೆ ನಂಬರ್ 16/3 ರಲ್ಲಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ಗೊತ್ತಾಗಿರುತ್ತದೆ ಮತ್ತು 1 ನೇ ಪ್ರತಿವಾದಿಯು 1(ಸಿ) ಪ್ರತಿವಾದಿಗೆ ಐಟಂ ನಂ.1 ನ್ನು ದಾನಪತ್ರ ಬರೆದಿರುವ ವಿಚಾರ ತಿಳಿದು ಬಂದಿದ್ದು ಇದು ಕಾನೂನುಬಾಹಿರವಾಗಿರುತ್ತದೆ ಇದು ವಾದಿಗೆ ಬಂಧನಕಾರಿಯಾಗಿರುವುದಿಲ್ಲ. ಆದ್ದರಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ.

4. ನ್ಯಾಯಾಲಯದಿಂದ ಪ್ರತಿವಾದಿಯರಿಗೆ ದಾವಾ ಸಮನ್ಸ್ ಜಾರಿಯಾಗಿದ್ದು, 1 ನೇ ಪ್ರತಿವಾದಿಯರು ತೀರಿಕೊಂಡಿದ್ದು ಅವರ ವಾರಸುದಾರರು 1(ಎ) ರಿಂದ 1 (ಡಿ) ಮತ್ತು 2 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. 3 ನೇ ಪ್ರತಿವಾದಿ ಮತ್ತು 1(ಸಿ) ಪ್ರತಿವಾದಿಯವರು ಒಬ್ಬರೇ ಆಗಿರುತ್ತಾರೆ .

ಈ ದಾವೆಯಲ್ಲಿ ಸಾಕ್ಷಿ ವಿಚಾರಣೆ ಮುಗಿದ ನಂತರ ದಿನಾಂಕ 12.03.2020 ರಂದು ಈ ನ್ಯಾಯಾಲಯವು ತೀರ್ಪನ್ನು ಘೋಷಿಸಿ ದಾವೆಯನ್ನು ವಜಾಗೊಳಿಸಿರುತ್ತದೆ. ತೀರ್ಪಿನ ವಿರುದ್ಧ ವಾದಿಯು ಆರ್.ಎ.ನಂ.46/2020 ರಂತೆ ಮೇಲ್ಮನವಿ ಸಲ್ಲಿಸಿದ್ದು ಮೇಲ್ಮನವಿ ನ್ಯಾಯಾಲಯದಲ್ಲಿ ಈ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಬದಿಗೊತ್ತಿ ಪುನಃ ವಾದಿಯವರಿಗೆ ಹೊಟ್ಟೆ ಕರಿಯಪ್ಪ ಮತ್ತು 1 ನೇ ಪ್ರತಿವಾದಿಯ ವಾರಸುದಾರರನ್ನು ಸೇರ್ಪಡೆ ಗೊಳಿಸಲು ಅವಕಾಶ ನೀಡಬೇಕೆಂದು ಆದೇಶ ಮಾಡಿ ಕಡತವನ್ನು ಹಿಂತಿರುಗಿ ಕಳುಹಿಸಿಕೊಟ್ಟಿರುವುದು ಕಂಡುಬರುತ್ತದೆ. ತದನಂತರ ವಾದಿಯು 1(ಇ) ಮತ್ತು 4 ರವರನ್ನು ಸೇರ್ಪಡೆಗೊಳಿಸಿರುತ್ತಾರೆ, ಆದರೆ ಅವರು ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. 1(ಸಿ) ಮತ್ತು 3 ನೇ ಪ್ರತಿವಾದಿಯು ಒಬ್ಬರೇ ವ್ಯಕ್ತಿಯಾಗಿರುವುದರಿಂದ ಪ್ರತಿವಾದಿ 3 ರವರನ್ನು ದಿಃ 14.09.2023 ರ ಆದೇಶದಂತೆ ತೆಗೆದು ಹಾಕಲಾಗಿದೆ. ಆದ್ದರಿಂದ ಮುಂದೆ ಪ್ರತಿವಾದಿ 3 ರವರ ಬದಲು 1(ಸಿ) ಎಂದೇ ಅವರನ್ನು ಈ ತೀರ್ಪಿನಲ್ಲಿ ಪರಿಗಣಿಸಲಾಗಿರುತ್ತದೆ .

5. <u>ಪ್ರತಿವಾದಿ 1(ಎ) ರಿಂದ 1(ಸಿ) ರವರ ಪ್ರತಿವಾದ ಪತ್ರದ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ</u>

ವಾದಿ ಮತ್ತು 1 ನೇ ಪ್ರತಿವಾದಿ ಲಕ್ಷೀಪತಿ ಇವರು ಉಗ್ರಪ್ಪ ಇವರ ಮಕ್ಕಳು. ಉಗ್ರಪ್ಪ ಇವರಿಗೆ ಜಿ. ಹೇಮರೆಡ್ಡಿ , ಜಿ. ಲಕ್ಷ್ಮೀಪತಿಯಪ್ಪ ಮತ್ತು ಕೃಷ್ಣಪ್ಪ ಎನ್ನುವ ಮಕ್ಕಳು ಇರುತ್ತಾರೆ

ಎನ್ನುವುದು ಸತ್ಯವಾಗಿರುತ್ತದೆ. ಐಟಂ ನಂ. 2 ಸರ್ವೆ ನಂ. 16/2 ಹೊಟ್ಟೆ ಕರಿಯಪ್ಪ ಇವರ ಆಸ್ತಿಯಾಗಿರುತ್ತದೆ ಎನ್ನುವುದು ಸತ್ಯವಾಗಿರುತ್ತದೆ.

ವಾದಿಯು ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಸಿ ಆರ್ 3/1991-92 ರ ಆದೇಶದ ವಿರುದ್ಧ ಆರ್.ಎ.ನಂ.63/1992-93 ರಂತೆ ಮೇಲ್ಮನವಿ ಸಲ್ಲಿಸಿದ್ದು, ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಸಿ ಆರ್ 3/1991-92 ರ ದಿ.09.10.1992 ರ ಆದೇಶವನ್ನು ತಳ್ಳಿಹಾಕಿ ತಹಶೀಲ್ದಾರ್ ರವರಿಗೆ ಲ್ಯಾಂಡ್ ರೆವಿನ್ಯೂ ಖಾತೆಯಡಿಯಲ್ಲಿ ಪ್ರಕರಣವನ್ನು ಪರಿಗಣಿಸಿ ಮೂರು ತಿಂಗಳೊಳಗೆ ಇತ್ಯರ್ಥ ಮಾಡಬೇಕೆಂದು ಆದೇಶ ಮಾಡಿರುವುದು ಸತ್ಯವಾಗಿರುತ್ತದೆ.

ಪ್ರತಿವಾದಿಯವರು ಲಕ್ಷ್ಮೀಪತಿ ಇವರ ಕಾನೂನು ಬದ್ಧ ವಾರಸುದಾರರಾಗಿದ್ದು, ಪ್ರತಿವಾದಿ 1(ಎ) ರವರು 1 ನೇ ಪ್ರತಿವಾದಿಯವರ ಹೆಂಡತಿಯಾಗಿದ್ದು 1 (ಬಿ) ಮತ್ತು 1(ಸಿ) ರವರು 1 ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ. ವಾದಿ ಮತ್ತು 1 ನೇ ಪ್ರತಿವಾದಿ ತಂದೆಯು ವಾದಿಯರ ಅನುಕೂಲದ ಸಲುವಾಗಿ ಬ್ಯಾಂಕಿನಲ್ಲಿ ಸಾಲವನ್ನು ಪಡೆದುಕೊಂಡಿದ್ದು ವಾದಿಯ ತಂದೆ ಸಾಲದ ಹಣವನ್ನು ಪಾವತಿಸಿರುವುದಿಲ್ಲ. ಆದ್ದರಿಂದ ಹಣಕಾಸು ಸಂಸ್ಥೆ ಮತ್ತು ಬ್ಯಾಂಕಿನವರು ದಾವಾ ಆಸ್ತಿಯನ್ನು ಸ್ವಾಧೀನ ಪಡೆದುಕೊಳ್ಳಲು ಪ್ರಯತ್ನಿಸಿದ್ದು ಆ ಸಮಯದಲ್ಲಿ ಒಂದನೇ ಪ್ರತಿವಾದಿಯು ಸಾಲವನ್ನು ತಾನು ಭರಿಸುತ್ತೇನೆಂದು ವಹಿಸಿಕೊಂಡಿದ್ದು, ಆದ್ದರಿಂದ ವಾದಿಯು ವಿಭಜನೆ ಮಾಡಿಕೊಂಡು ದಿ.05.01.1978 ರಂದು ಒಟ್ಟು ಕುಟುಂಬದಿಂದ ಹಣವನ್ನು ಪಡೆದುಕೊಂಡು ಹೊರ ಹೋಗಿರುತ್ತಾರೆ ಅವರು ಆ ಹಣವನ್ನು ಪಡೆದುಕೊಂಡು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಮತ್ತು ಆ ಹಣದಿಂದ ವ್ಯಾಪಾರ ಮಾಡುತ್ತಿದ್ದಾರೆ .

ತದನಂತರ ಲಕ್ಷ್ಮೀಪತಿಯಪ್ಪ ಇವರು ದಾವಾ ಆಸ್ತಿಯ ಮಾಲೀಕರಾಗಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದು ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೆ ಮತ್ತು ದಾವಾ ಆಸ್ತಿಯ ಅಭಿವೃದ್ಧಿಗಾಗಿ ಸಾಲವನ್ನು ಪಡೆದುಕೊಂಡಿರುತ್ತಾರೆ. ಐಟಂ ನಂ.2 ನೇ ಆಸ್ತಿಯು ವಾದಿ ಮತ್ತು ಪ್ರತಿವಾದಿಯವರ ದೊಡ್ಡಪ್ಪ ಹೊಟ್ಟೆಕರಿಯಪ್ಪನ ಆಸ್ತಿಯಾಗಿದ್ದು ಆ ಹೊಟ್ಟೆಕರಿಯಪ್ಪ ಮಕ್ಕಳಿಲ್ಲದೆ ತೀರಿಕೊಂಡಿದ್ದು, ಆ ಆಸ್ತಿಯು ವಾದಿ ಮತ್ತು 1 ನೇ ಪ್ರತಿವಾದಿಯವರ ಜಂಟಿ ಖಾತೆಯಲ್ಲಿತ್ತು. ದಿ.15.01.1978 ರಂದು ವಿಭಜನೆ ಆದ ನಂತರ ಲಕ್ಷ್ಮೀಪತಿಯಪ್ಪ ಇವರಿಗೆ ಸಿ.ಆರ್.03/1991-92 ರ ಆದೇಶದಂತೆ ಖಾತೆ ಬದಲಾವಣೆ ಆಗಿರುತ್ತದೆ. ಈ ವಿಚಾರವು ವಾದಿ ಗಮನದಲ್ಲಿರುತ್ತದೆ. ತದನಂತರ ವಾದಿಯು ಉಪ ತಹಶೀಲ್ದಾರ್ ಹಿರಿಯೂರು ತಾಲ್ಲೂಕು ಇವರ ಸಮಕ್ಷಮ ಸಿ.ಆರ್.03/1991-92 ರಲ್ಲಿ ತಕರಾರು ಸಲ್ಲಿಸಿದ್ದು, ವಿಚಾರಣೆ ಆದ ನಂತರ ವಾದಿಯರು ಸಲ್ಲಿಸಿದ ತಕರಾರು ತಳ್ಳಿ ಹಾಕಿ ದಿ.09.10.1992 ರಂದು ಅರ್ಜಿಯನ್ನು ವಿಲೇವಾರಿ ಮಾಡಿರುತ್ತಾರೆ.

ವಾದಿಯು ಉಪ ವಿಭಾಗಾಧಿಕಾರಿ, ಚಿತ್ರದುರ್ಗದಲ್ಲಿ ಆ ಆದೇಶದ ವಿರುದ್ಧ. ಆರ್.ಎ. ನಂ. 63/1992-93 ರಂತೆ ಮೇಲ್ಮನವಿ ಸಲ್ಲಿಸಿದ್ದು, ಆ ಮೇಲ್ಮನವಿಯು 30.06.1995 ರಂದು ವಿಲೇವಾರಿಗೊಂಡು ತಹಶೀಲ್ದಾರ್ ಇವರಿಗೆ 3 ತಿಂಗಳೊಳಗಾಗಿ ವಿಚಾರಣೆ ನಡೆಸಿ ಪ್ರಕರಣವನ್ನು ಇತ್ಯರ್ಥ ಪಡಿಸಲು ಆದೇಶ ಮಾಡಿರುತ್ತಾರೆ. ಉಪ ವಿಭಾಗಾಧಿಕಾರಿ, ಚಿತ್ರದುರ್ಗ ಇವರ ಆದೇಶದಂತೆ ವಾದಿಯು ತಹಶೀಲ್ದಾರ್ ಹಿರಿಯೂರು ಇವರ ಸಮಕ್ಷಮ ಆರ್ ಆರ್ ಟಿ (ಸಿ ಆರ್):17/1995-96 ರಂತೆ ಅರ್ಜಿಯನ್ನು ಸಲ್ಲಿಸಿದ್ದು ತಹಶೀಲ್ದಾರ್ ರವರು ಸಾಕಷ್ಟು ಸಮಯಾವಕಾಶ ನೀಡಿದ್ದು ಆದರೆ ವಾದಿಯು ಅದನ್ನು ಪುರಾವೆಗೊಳಿಸಲು ಮುಂದೆ

ಬಂದಿರುವುದಿಲ್ಲ. ತದನಂತರ ತಹಶೀಲ್ದಾರರು 30.05.1996 ರಂದು ಲಕ್ಷ್ಮೀಪತಿಯಪ್ಪ ಇವರ ಹೆಸರಿಗೆ ಖಾತೆ ಮುಂದುವರೆಸುವಂತೆ ಆದೇಶ ಮಾಡಿರುತ್ತಾರೆ.

ತದನಂತರ ಲಕ್ಷ್ಮೀಪತಿಯವರು ದಾವಾ ಆಸ್ತಿಗೆ ಮಾಲೀಕರಾಗಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿದ್ದು ಮತ್ತು ಕಂದಾಯವನ್ನು ಪಾವತಿಸಿಕೊಂಡು ಬಂದಿರುತ್ತಾರೆ. ಲಕ್ಷ್ಮೀಪತಿಯಪ್ಪ ಮತ್ತು ಅವರ ಮಗ ನರಸಿಂಹಮೂರ್ತಿ ಇವರು ದಿನಾಂಕ.16.03.1998 ರಂದು ನೋಂದಾಯಿತ ಕರಾರು ಪತ್ರವನ್ನು ವೆಂಕಟಾಚಲಶೆಟ್ಟಿ ಇವರಿಗೆ ಐಟಂ ನಂ 3 ರ ಆಸ್ತಿಯಲ್ಲಿ ಸ್ವಲ್ಪ ಭಾಗ ಬರೆದುಕೊಟ್ಟಿದ್ದು ದಿ15.10.1998 ರಂದು ವೆಂಕಟಾಚಲಶೆಟ್ಟಿ ರವರು ಆ ಕರಾರು ಪತ್ರವನ್ನು ರದ್ದು ಪಡಿಸಿಕೊಂಡಿದ್ದು ಅದೇ ದಿನ ಲಕ್ಷ್ಮೀಪತಿಯಪ್ಪ ಮತ್ತು ಅವರ ಮಗ ನರಸಿಂಹಮೂರ್ತಿ ಇವರು ಆ ಆಸ್ತಿಯನ್ನು 2 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ.

1 ನೇ ಪ್ರತಿವಾದಿಯ ಮಗ ದಿಃ 09.11.1998 ರಂದು ಅವರ ಹೆಂಡತಿ ಸುನಂದಮ್ಮ ಇವರನ್ನು ಬಿಟ್ಟು ತೀರಿಕೊಂಡಿರುತ್ತಾರೆ. ತದನಂತರ 1 ನೇ ಪ್ರತಿವಾದಿಯು ಐಟಂ ನಂ.1 ನೇ ಆಸ್ತಿಯನ್ನು ಅವರ ಮಗಳು ನಾಗವೇಣಿ ಇವರಿಗೆ ದಿಃ17.01.2003 ರಂದು ದಾನ ಪತ್ರ ಬರೆದುಕೊಟ್ಟಿದ್ದು, ತದನಂತರ ಲಕ್ಷ್ಮೀಪತಿಯಪ್ಪನ ಮಕ್ಕಳು ಲಕ್ಷ್ಮೀಪತಿ ಮತ್ತು 2 ನೇ ಪ್ರತಿವಾದಿ ವಿರುದ್ಧ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಅಸಲು ದಾವೆ ನಂ.33/2012 ರಂತೆ ದಾವೆಯನ್ನು ಹೂಡಿದ್ದು ದಾವೆ ಚಾಲ್ತಿಯಲ್ಲಿರುವಾಗ ದಿಃ18.06.2015 ರಂದು ಲಕ್ಷ್ಮೀಪತಿಯಪ್ಪ ತೀರಿಕೊಂಡಿದ್ದು ಆ ದಾವೆಯು ಭಾಗಶಃ ಡಿಕ್ರಿಯಾಗಿರುತ್ತದೆ. ಆ ವ್ಯವಹರಣೆಯನ್ನು ವಾದಿಯು ಮೌನವಾಗಿ ವೀಕ್ಷಣೆ ಮಾಡಿ ಈಗ ದುರ್ಲಾಭ ಪಡೆಯುವ ಸಲುವಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ .

ವಾದಿಯು ಬೆಂಗಳೂರಿನಲ್ಲಿ ವಾಸವಾಗಿದ್ದು ವಾದಿಯು ಪ್ರತಿವಾದಿಯವರೊಂದಿಗೆ ದ್ವೇಷ ಇರುವಂತಹ ವ್ಯಕ್ತಿಗಳೊಂದಿಗೆ ಸೇರಿಕೊಂಡು ಬೆಲೆ ಬಾಳುವ ಆಸ್ತಿಯನ್ನು ಪಡೆದುಕೊಳ್ಳುವ ಸಲುವಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಈ ದಾವೆಯು ನರಸಿಂಹಮೂರ್ತಿ ಹೆಂಡತಿ ಮತ್ತು ಲಕ್ಷ್ಮೀಪತಿ ಇನ್ನೊಬ್ಬ ಮಗಳು ಸುಜಾತ ಇವರು ಸೇರ್ಪಡೆಯಾಗದೆ ಊರ್ಜಿತವಾಗಿರುವುದಿಲ್ಲ, ಈ ದಾವೆಯು ಕಾಲಪರಿಮಿತಿಯನ್ನು ದಾಟಿರುತ್ತದೆ . ಆದ್ದರಿಂದ ಈ ದಾವೆಯನ್ನು ವಜಾಗೊಳಿಸಲು ಕೋರಿಕೊಂಡಿರುತ್ತಾರೆ.

6. <u>2 ನೇ ಪ್ರತಿವಾದಿಯವರ ಪ್ರತಿವಾದ ಪತ್ರದ ಸಾರಾಂಶ ಈ ಕೆಳಗಿನಂತಿರುತ್ತದೆ ಃ</u>

ಉಗ್ರಪ್ಪ ಇವರಿಗೆ ಹೇಮರೆಡ್ಡಿ ಮತ್ತು ಲಕ್ಷ್ಮೀಪತಿ ಎನ್ನುವ ಇಬ್ಬರು ಗಂಡು ಮಕ್ಕಳಿದ್ದಾರೆ ಎನ್ನುವುದು ಸತ್ಯವಾಗಿದ್ದು ಪ್ರತಿವಾದಿ 1(ಸಿ) ರವರು 1 ನೇ ಪ್ರತಿವಾದಿಯವರ ಮಗಳು ಎನ್ನುವುದು ಸತ್ಯವಾಗಿರುತ್ತದೆ. ಆಸ್ತಿಯು ಮೂಲತಃ ಉಗ್ರಪ್ಪ ಇವರ ಪಿತ್ರಾರ್ಜಿತ ಮತ್ತು ಜಂಟಿ ಸ್ವಾಧೀನದ ಆಸ್ತಿ ಎಂಬುದು ಸುಳ್ಳಾಗಿರುತ್ತದೆ. ಐಟಂ ನಂ.2 ರ ಆಸ್ತಿಯು ಹೊಟ್ಟೆಕರಿಯಪ್ಪ ಇವರ ಆಸ್ತಿ ಎನ್ನುವುದು ಸತ್ಯವಾಗಿರುತ್ತದೆ. 1 ನೇ ಪ್ರತಿವಾದಿ ಮತ್ತು ಅವರ ಮಗ ಸರ್ವೆ ನಂ.16/3 ರಲ್ಲಿ 3 ಎಕರೆ 16 ಗುಂಟೆ ಐಟಂ ನಂ.3 ರ ಆಸ್ತಿಯನ್ನು ಪಿ ಎಲ್ ಡಿ ಬ್ಯಾಂಕ್ ಹಿರಿಯೂರಿನಲ್ಲಿ ಪಡೆದು ಕೊಂಡ ಸಾಲದ ಪಾವತಿಗಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ವಾದಿಗೆ ಈ ವಿಚಾರವು ಕ್ರಯವಾದ ದಿನಾಂಕದಿಂದ ಗೊತ್ತಿರುತ್ತದೆ, 2 ನೇ ಪ್ರತಿವಾದಿಯು ದಾಖಲಾತಿಗಳನ್ನು ಪರಿಶೀಲಿಸಿ ಅವರು ಆಸ್ತಿಯನ್ನು ಖರೀದಿಸಿದ್ದು 2 ನೇ ಪ್ರತಿವಾದಿಯು ಪ್ರಾಮಾಣಿಕ ಖರೀದಿದಾರರಾಗಿರುತ್ತಾರೆ. ಅವರ ಕುಟುಂಬದ ಸಾಲದ ಮರು ಪಾವತಿಗಾಗಿ 1 ನೇ ಪ್ರತಿವಾದಿಯು ಐಟಂ ನಂ.3 ರ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ ಆ ಕ್ರಯವು ವಾದಿಗೆ ಬಂಧನಕಾರಿಯಾಗಿರುತ್ತದೆ. .

ವಾದಿಯು ಬೆಂಗಳೂರಿನಲ್ಲಿ ಸುಮಾರು 30-40 ವರ್ಷದಿಂದ ವಾಸವಾಗಿದ್ದು ಗೊರ್ಲಕಟ್ಟೆ ಹಿರಿಯೂರು ತಾಲೂಕಿನಲ್ಲಿ ಯಾವತ್ತೂ ವಾಸವಾಗಿರುವುದಿಲ್ಲ ಮತ್ತು ವಾದಿಯು 1 ನೇ ಪ್ರತಿವಾದಿಯೊಂದಿಗೆ ದಾವಾ ಆಸ್ತಿಯನ್ನು ಅನುಭವಿಸಿಕೊಂಡು ಬಂದಿರುವುದಿಲ್ಲ, 1 ನೇ ಪ್ರತಿವಾದಿಯ ಮಗಳು ಓ.ಎಸ್.ನಂ.30/2012 ನ್ನು ಈ ಪ್ರತಿವಾದಿಯ ವಿರುದ್ಧ ಮತ್ತು ಅವರ ತಂದೆಯ ವಿರುದ್ಧ ದಾವಾಸ್ತಿ -3 ನ್ನು ಕಬಳಿಸಲು ಸಲ್ಲಿಸಿದ್ದು ಆ ದಾವೆ ಚಾಲ್ತಿಯಲ್ಲಿರುತ್ತದೆ. ಆದ್ದರಿಂದ ದಾವೆಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

7. ವಾದಪತ್ರ ಮತ್ತು ಪ್ರತಿವಾದ ಪತ್ರದ ಆಧಾರದ ಮೇರೆಗೆ ನ್ಯಾಯಾಲಯವು ಈ ಕೆಳಕಂಡ ಅಂಶಗಳನ್ನು ರಚಿಸಿರುತ್ತದೆಃ-

1. Whether the plaintiff proves that the schedule properties are ancestral and joint family properties of himself and defendant No.1?

2. Whether the plaintiffs proves that, the sale deed executed by defendant No.1 and his son in favour of defendant No.2 with respect to 3 acres 14 guntas of land in Sy.No.16/3 is illegal and hence the same is not binding on him?

3. Whether the plaintiff proves that, the gift deed executed by defendant No.1 in favour of 3rd defendant with respect to item No.1 of the suit property is illegal and hence the same is not binding on him?

4. Whether the defendant No1(a) to 1(c) prove that, there was a partition in the joint family on 15.01.1978?

5. Whether the plaintiff is entitled to the relief of declaration and partition as sought in the suit?

6. What decree or order?

8. ವಾದಿಯ ಪರವಾಗಿ ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡು, ಒಟ್ಟು 49 ದಾಖಲಾತಿಗಳನ್ನು ನಿ.ಪಿ-1 ರಿಂದ 49 ಎಂದು ಗುರುತಿಸಿಕೊಂಡಿರುತ್ತಾರೆ ಹಾಗೂ ಇದಕ್ಕೆ ಪ್ರತಿಯಾಗಿ, 1(ಸಿ) ಪ್ರತಿವಾದಿ ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡು ಒಟ್ಟು 2 ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ , 2 ನೇ ಪ್ರತಿವಾದಿ ಕೆಂಚಮ್ಮ ಇವರು ತನ್ನನ್ನು ತಾನು ಡಿ.ಡಬ್ಲೂ.2 ಎಂದು ವಿಚಾರ ಮಾಡಿಕೊಂಡು ನಿಡಿ.3 ರಿಂದ ನಿಡಿ.15 ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ .

9. ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದವನ್ನು ಕೇಳಿ, ಮೌಖಿಕ ಸಾಕ್ಷ್ಯ ಮತ್ತು ದಸ್ತಾವೇಜುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ನ್ಯಾಯಾಲಯವು ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ.

| | | |
|---|---|---|
| ವಿವಾದಾಂಶ-1 | ಃ | ಭಾಗಶಃ ಸಕಾರಾತ್ಮಕವಾಗಿ, |
| ವಿವಾದಾಂಶ-2 | ಃ | ನಕಾರಾತ್ಮಕವಾಗಿ, |
| ವಿವಾದಾಂಶ-3 | ಃ | ಸಕಾರಾತ್ಮಕವಾಗಿ, |
| ವಿವಾದಾಂಶ-4 | ಃ | ನಕಾರಾತ್ಮಕವಾಗಿ, |
| ವಿವಾದಾಂಶ-5 | ಃ | ಭಾಗಶಃ ಸಕಾರಾತ್ಮಕವಾಗಿ, |
| ವಿವಾದಾಂಶ-6 | ಃ | ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ |

## ಕಾ ರ ಣ ಗ ಳು

10. **ವಿವಾದಾಂಶ-1 ಮತ್ತು 2ಃ-** ಈ ಎರಡೂ ವಿವಾದಾಂಶಗಳು ಒಂದಕ್ಕೊಂದು ಅಂತರ್ಗತವಾಗಿದ್ದು, ಸಂದರ್ಭ ಮತ್ತು ಸನ್ನಿವೇಶಗಳು ಪುನರಾವರ್ತನೆ ಆಗುವುದನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಯಿತು.

ವಾದಿಯ ಪ್ರಕಾರ ಅವರು ಮತ್ತು ಲಕ್ಷ್ಮೀಪತಿಯಪ್ಪ ಇವರು ಉಗ್ರಪ್ಪ ಇವರ ಮಕ್ಕಳಾಗಿರುತ್ತಾರೆ ಪ್ರತಿವಾದಿ 1 ಬಿ, ಸಿ, ಡಿ ಯವರು ಲಕ್ಷ್ಮೀಪತಿಯಪ್ಪ ಅವರ ಮಕ್ಕಳಾಗಿದ್ದು, ಉಗ್ರಪ್ಪ ಇವರಿಗೆ 3 ಜನ ಮಕ್ಕಳಿದ್ದು ಅವರುಗಳು ಜಿ. ಹೇಮರೆಡ್ಡಿ, ಕೃಷ್ಣಪ್ಪ ಮತ್ತು ಜಿ ಲಕ್ಷ್ಮೀಪತಿಯಾಗಿದ್ದು, ಕೃಷ್ಣಪ್ಪ ಇವರು ಯಾವುದೇ ಸಂತಾನ ಇಲ್ಲದೇ ತೀರಿಕೊಂಡಿರುತ್ತಾರೆ, ಲಕ್ಷೀಪತಿಯವರು ತೀರಿಕೊಂಡಿದ್ದು ಲಕ್ಷ್ಮೀಪತಿ ಹೆಂಡತಿ ರಂಗಮ್ಮ ಮತ್ತು ಧನಲಕ್ಷ್ಮಿ, ನಾಗವೇಣಿ ಮತ್ತು ಸುಜಾತ ಅವರ ಮಕ್ಕಳಾಗಿದ್ದು, ಲಕ್ಷ್ಮೀಪತಿ ತೀರಿಕೊಂಡ ನಂತರ ಅವರುಗಳು ದಾವಾ ಆಸ್ತಿಯನ್ನು ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ, ಸರ್ವೆ ನಂ. 16/2 ಹೊಟ್ಟೆ ಕರಿಯಪ್ಪ ಇವರ ಆಸ್ತಿಯಾಗಿದ್ದು, ಹೊಟ್ಟೆ ಕರಿಯಪ್ಪ ಇವರಿಗೆ ಯಾವುದೇ ಮಕ್ಕಳಿಲ್ಲದೇ ಇರುವುದರಿಂದ ವಾದಿ ಮತ್ತು ಲಕ್ಷ್ಮೀಪತಿಯವರು ಆ ಆಸ್ತಿಯನ್ನು ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ. 1992 ರಲ್ಲಿ 1 ನೇ ಪ್ರತಿವಾದಿಯು ನಡವಳಿಕೆಯಲ್ಲಿ ಬದಲಾವಣೆ ಕಂಡು ಬಂದಿರುತ್ತದೆ ಎಂಬುದಾಗಿರುತ್ತದೆ .

11. ಈ ದಾವೆಯಲ್ಲಿ ಸಾಕ್ಷಿ ವಿಚಾರಣೆ ಮುಗಿದ ನಂತರ ದಿನಾಂಕ 12.03.2020 ರಂದು ಈ ನ್ಯಾಯಾಲಯವು ತೀರ್ಪನ್ನು ಘೋಷಿಸಿ ದಾವೆಯನ್ನು ವಜಾಗೊಳಿಸಿರುತ್ತದೆ. ದಾವೆಯ ವಿರುದ್ಧ ವಾದಿಯು ಆರ್.ಎ.ನಂ.46/2020 ರಂತೆ

ಮೇಲ್ಮನವಿ ಸಲ್ಲಿಸಿದ್ದು ಗೌರವಾನ್ವಿತ ಮೇಲ್ಮನವಿ ನ್ಯಾಯಾಲಯವು ಈ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಬದಿಗೊತ್ತಿ ಪುನಃ ವಾದಿಯವರಿಗೆ **ಹೊಟ್ಟೆಕರಿಯಪ್ಪ** ಮತ್ತು 1 ನೇ ಪ್ರತಿವಾದಿಯ ವಾರಸುದಾರರನ್ನು ಸೇರ್ಪಡೆ ಗೊಳಿಸಲು ಅವಕಾಶ ನೀಡಬೇಕೆಂದು ಆದೇಶ ಮಾಡಿ ಕಡತವನ್ನು ಹಿಂತಿರುಗಿ ಕಳುಹಿಸಿಕೊಟ್ಟಿರುವುದು ಕಂಡುಬರುತ್ತದೆ.

12. ವಾದಿಯವರು ತನ್ನನ್ನು ತಾನು ಪಿ.ಡಬ್ಲ್ಯೂ1 ಎಂದು ವಿಚಾರಣೆ ಮಾಡಿಕೊಂಡು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಒಟ್ಟು 49 ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ನಿ.ಪಿ–1 ರಿಂದ 3 ಪಹಣಿ ಪತ್ರಿಕೆ ಧೃಡೀಕೃತ ನಕಲುಗಳು, ನಿ.ಪಿ–4 ಐ ಹೆಚ್ ಸಿ ಆದೇಶದ ದೃಢೀಕೃತ ನಕಲು, ನಿ.ಪಿ–5 ಸರ್ವೆ ನಂಬರ್ 16/1 ರ ಪಹಣಿ ಪತ್ರಿಕೆ,ನಿ.ಪಿ–6 ಸರ್ವೆ ನಂಬರ್ 16/2 ರ ಪಹಣಿ ಪತ್ರಿಕೆ, ನಿ.ಪಿ–7 ಸರ್ವೆ ನಂಬರ್ 16/3 ರ ಪಹಣಿ ಪತ್ರಿಕೆ, ನಿ.ಪಿ–8 ಕ್ರಯ ಪತ್ರದ ದೃಢೀಕೃತ ನಕಲು, ನಿ.ಪಿ–9 ದಾನ ಪತ್ರದ ದೃಢೀಕೃತ ನಕಲು, ನಿ.ಪಿ–10 ಎಂ.ಆರ್.ನಂ. 2/98–99 ರ ದೃಢೀಕೃತ ನಕಲು, ನಿ.ಪಿ–11 ಎಂಆರ್ ನಂ. 3/98–99 ರ ದೃಢೀಕೃತ ನಕಲು, ನಿ.ಪಿ–12 ಎಂಆರ್ ಹೆಚ್ 7 ರ ಆದೇಶದ ಪ್ರತಿ, ನಿ.ಪಿ–13 ಆರ್.ಎ 63/92–93 ರಲ್ಲಿ ಉಪವಿಭಾಗಾಧಿಕಾರಿ ಮಾಡಿದ ಆದೇಶದ ಧೃಡೀಕೃತ ನಕಲು, ನಿ.ಪಿ–14 ರಿಂದ 18 ಸರ್ವೆ ನಂ.**11/1** ರ ಪಹಣಿ ಪತ್ರಿಕೆಗಳು, ನಿ.ಪಿ–19 ರಿಂದ 25 ಸರ್ವೆ ನಂ.11/2 ರ ಪಹಣಿ ಪತ್ರಿಕೆಗಳು, ನಿ.ಪಿ–26 ರಿಂದ 48 ಸರ್ವೆ ನಂ.11/2 ರ ಕಂಪ್ಯೂಟರೈಸ್ಡ್ ಪಹಣಿ ಪತ್ರಿಕೆಗಳು, ನಿ.ಪಿ–49 ಎಂ.ಆರ್. ಹೆಚ್ –2 ರ ಪ್ರತಿ ಆಗಿರುತ್ತದೆ .

**13.** ಪ್ರತಿವಾದಿ **1**(ಸಿ) ಅವರು ತನ್ನನ್ನು ತಾನು ಡಿ.ಡಬ್ಲೂ .**1** ಎಂದು ವಿಚಾರಣೆ ಮಾಡಿಕೊಂಡು ತನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದ ಪತ್ರದ ಅಂಶವನ್ನು

ಪುನರುಚ್ಚರಿಸಿರುತ್ತಾರೆ ಮತ್ತು ಹಕ್ಕು ಖುಲಾಸೆ ಪತ್ರವನ್ನು ನಿಡಿ.1 ಎಂದು ದಾನಪತ್ರವನ್ನು ನಿಡಿ.2 ಎಂದು ಗುರುತಿಸಿಕೊಂಡಿರುತ್ತಾರೆ . 2 ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲೂ .2 ಎಂದು ವಿಚಾರಣೆ ಮಾಡಿಕೊಂಡು ತನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದ ಪತ್ರದ ಅಂಶವನ್ನು ಪುನರುಚ್ಚರಿಸಿರುತ್ತಾರೆ ಹಾಗೂ 12 ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ .

14. ನಿ.ಡಿ-1 ಹಕ್ಕು ಖುಲಾಸೆ ಪತ್ರದ ಧೃಢೀಕೃತ ನಕಲು , ನಿ.ಡಿ-2 ದಾನಪತ್ರದ ಮೂಲ ಪ್ರತಿ, ನಿ.ಡಿ-2(ಎ) ಲಕ್ಷ್ಮೀಪತಿಯಪ್ಪನವರ ಸಹಿ , ನಿ.ಡಿ-3 ದಿಃ15.10.1998 ರ ಕ್ರಯ ಪತ್ರದ ದೃಢಿಕೃತ ನಕಲು , ನಿ.ಡಿ-4 ಮ್ಯುಟೇಷನ್ ರಿಜಿಸ್ಟರ್ ಪ್ರತಿ , ನಿ.ಡಿ-5 ರಶೀದಿ ಪಟ್ಟಾ, ನಿ.ಡಿ-6 ಮತ್ತು 7 ಸರ್ಕಾರಿ ಬಾಕಿ ಪಾವತಿಯ ರಶೀದಿಗಳು , ನಿ.ಡಿ-8 ಮತ್ತು 9 ಸರ್ವೆ ನಂ.16/5 ರ ಪಹಣಿ ಪತ್ರಿಕೆಗಳು , ನಿ.ಡಿ- 10 ಗ್ರಾಮ ನಮೂನೆ ಸಂಖ್ಯೆ 1 , ನಿ.ಡಿ- 11 ಮತ್ತು 12 ಓಎಸ್ ನಂ.33/2012 ರ ತೀರ್ಪು ಮತ್ತು ಡಿಕ್ರಿ ಪ್ರತಿಗಳು , ನಿ.ಡಿ- 13 ಓಎಸ್ ನಂ.150/2013 ರ ಆದೇಶ ಪುಟದ ಧೃಢೀಕೃತ ನಕಲು , ನಿ.ಡಿ- 14 ಓಎಸ್ ನಂ.150/2013 ರ ವಾದ ಪತ್ರದ ಧೃಢೀಕೃತ ನಕಲು , ನಿ ಡಿ- 15 ಓಎಸ್ ನಂ.150/2013 ರ ಪ್ರತಿವಾದ ಪತ್ರದ ಧೃಢೀಕೃತ ನಕಲು ಆಗಿರುತ್ತದೆ .

15. 2 ನೇ ಪ್ರತಿವಾದಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ ಲಕ್ಷೀಪತಿಯಪ್ಪ ಮತ್ತು ಆತನ ಮಗ ನರಸಿಂಹಮೂರ್ತಿ ಅವರಿಗೆ ಸರ್ವೆ ನಂ. 16/3 ರಲ್ಲಿ 3 ಎಕರೆ 14 ಗುಂಟೆ ಆಸ್ತಿಯನ್ನು ಪಿಎಲ್‌ಡಿ ಬ್ಯಾಂಕ್ ಹಿರಿಯೂರಿನಲ್ಲಿ ಮಾಡಿದಂತ ಸಾಲವನ್ನು ತೀರುವಳಿ ಮಾಡಲು ಮಾರಾಟ ಮಾಡಿರುತ್ತಾರೆ, ಸದರಿ ಕ್ರಯವು ಊರ್ಜಿತವಾಗಿದ್ದು ವಾದಿಯು ಈಗ್ಗೆ 30 ರಿಂದ 40 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದು, ಹಿರಿಯೂರು ತಾಲ್ಲೂಕು ಗೋರ್ಲಡಕು ಗ್ರಾಮದಲ್ಲಿ ಎಂದೂ ವಾಸವಾಗಿರುವುದಿಲ್ಲ , ವಾದಿ ಮತ್ತು 1 ನೇ ಪ್ರತಿವಾದಿ ದಾವಾ 3 ನೇ

ಸ್ವತ್ತು, 3 ಎಕರೆ 14 ಗುಂಟೆ ಜಮೀನಿನಲ್ಲಿ 30 ವರ್ಷಗಳಿಂದ ಸ್ವಾಧೀನ ಹೊಂದಿರುವುದಿಲ್ಲ, ಖರೀದಿ ಮಾಡಿದ ನಂತರ ಅವರು ಹಕ್ಕು ಹಿತಾಸಕ್ತಿ ಹೊಂದಿ ಸ್ವಾಧೀನ ಹೊಂದಿರುತ್ತಾರೆ, 1 ನೇ ಪ್ರತಿವಾದಿ ಮಗಳು ಅವರ ಮತ್ತು ಅವರ ತಂದೆ ಮೇಲೆ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ 33/2012 ರಲ್ಲಿ ಪಾಲು ವಿಭಾಗ ಕೋರಿ ದಾವೆ ಸಲ್ಲಿಸಿದ್ದು ಸದರಿ ದಾವಾ ವಜಾಗೊಂಡಿರುತ್ತದೆಂದು 1 ನೇ ಪ್ರತಿವಾದಿ ಅವರ ವಾರಸುದಾರರಿಗೆ ಯಾವುದೇ ಹಕ್ಕು, ಹಿತಾಸಕ್ತಿ ಸ್ವಾಧೀನ ಇರುವುದಿಲ್ಲವೆಂದು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿ ಈ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ .

16. ಪಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ದಾವಾ ಶೆಡ್ಯೂಲ್ 1 ನೇ ಐಟಂ ಆಸ್ತಿಯು ಸುನಂದಮ್ಮ ಹೆಸರಿನಲ್ಲಿ ಖಾತೆ ಇರುತ್ತದೆ, ಲಕ್ಷ್ಮೀಪತಿಯಪ್ಪನ ಮಗನಿಂದ ಸುನಂದಮ್ಮ ಹೆಸರಿಗೆ ಖಾತೆಯಾಗಿರುತ್ತದೆ, ಸುನಂದಮ್ಮನಿಗೆ ವಾರಸುನಾತೆಯಿಂದ ಅವರ ಗಂಡ ನರಸಿಂಹಮೂರ್ತಿ ಹೆಸರಿನಿಂದ ಖಾತೆಯಾಗಿರುತ್ತದೆ, ಸರ್ವೆ ನಂ. 16/2 ರ ಲಕ್ಷ್ಮೀಪತಿಯಪ್ಪ 2 ನೇ ಪ್ರತಿವಾದಿಗೆ ಆ ಜಮೀನು ಮಾರಾಟ ಮಾಡಿದ್ದಾರೆ, ಲಕ್ಷ್ಮೀಪತಿಯಪ್ಪ ಸರ್ವೆ ನಂ. 16/2 ರಲ್ಲಿ 3 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ, ಸರ್ವೆ ನಂ. 16/3 ರಲ್ಲಿ 6 ಎಕರೆ 16 ಗುಂಟೆ ಜಮೀನು ಲಕ್ಷ್ಮೀಪತಿಯಪ್ಪ ನ ಹೆಸರಿಗೆ ಖಾತೆಯಾಗಿರುತ್ತದೆ ಎಂದು ನುಡಿದಿರುತ್ತಾರೆ .

17. ಡಿ.ಡಬ್ಲೂ.2 ರವರು ಕೂಡ ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿಯು 30-40 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದಾರೆಂದು, ಹಿರಿಯೂರು ತಾಲ್ಲೂಕು, ಗೊರ್ಲಡಕು ಗ್ರಾಮದಲ್ಲಿ ವಾಸವಾಗಿರುವುದಿಲ್ಲವೆಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯವರ ಪ್ರಕಾರ ಕೂಡ 1978 ರಿಂದ ವಾದಿಯು ತನ್ನ ಪಾಲನ್ನು ತೆಗೆದು ಕೊಂಡು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂಬುದಾಗಿರುತ್ತದೆ .

**18.** ಒಂದು ಕುಟುಂಬದ ಸದಸ್ಯನು ತಮ್ಮ ಕರ್ತವ್ಯದ ನಿಮಿತ್ತ ಅಥವಾ ಬೇರೆ ಬೇರೆ ಕಾರಣಗಳಿಂದ ಕುಟುಂಬದ ಮನೆಯಿಂದ ಹೊರಗಿದ್ದಲ್ಲಿ ಅವರಿಗೆ ತಂದೆ ತೀರಿಕೊಂಡ ನಂತರ ಅವರ ಆಸ್ತಿಯನ್ನು ವಿಲೇವಾರಿ ಮಾಡದೇ ಹೋದಲ್ಲಿ ಆ ಆಸ್ತಿಯ ಮೇಲಿನ ಹಕ್ಕು ಕಳೆದು ಹೋಗಿದೆ ಎಂದು ಊಹಿಸಲು ಸಾಧ್ಯವಿಲ್ಲ ಅಂತಹ ವ್ಯಕ್ತಿಯು ಆ ಆಸ್ತಿಯಲ್ಲಿ ನೇರವಾಗಿ ವಾಸಿಸದಿದ್ದರೂ ಕೂಡ ಕಾನೂನು ಪ್ರಕಾರ ಅವರಿಗೆ ಕಾನೂನಾತ್ಮಕ ಸ್ವಾಧೀನ ಇರುವುದಾಗಿ ಪರಿಗಣಿಸಲಾಗುತ್ತದೆ . ಕೇವಲ ಅವರು ಊರಿಗೆ ಬಂದಿಲ್ಲ ಅಥವಾ ಆಸ್ತಿಯನ್ನು ಉಪಯೋಗಿಸಿಲ್ಲ ಎಂಬ ಕಾರಣಕ್ಕೆ ಅವರ ಹಕ್ಕು ಸ್ವಯಂ ಆಗಿ ನಾಶವಾಗುವುದಿಲ್ಲ ಅಥವಾ ಇತರ ಕುಟುಂಬದ ಸದಸ್ಯರಿಗೆ ವರ್ಗಾವಣೆಯಾಗುವುದಿಲ್ಲ.

**19**. ವಾದಿಯನ್ನು ಪಾಟೀ ಸವಾಲು ಮಾಡುವ ಸಮಯದಲ್ಲಿ ಪ್ರತಿವಾದಿಯವರು ವಾದಿಗೆ ಅವರು **1978** ರಲ್ಲಿ ಲಕ್ಷ್ಮೀಪತಿಯವರ ಹೆಸರಿಗೆ ಹಕ್ಕುಬಿಟ್ಟ ಪತ್ರ ಬರೆದು ಬ್ಯಾಂಕಿನ ಎಲ್ಲಾ ಸಾಲ ನೀವೇ ತೀರಿಸಿಕೊಳ್ಳಿ ಎಂದು ಹೇಳಿ ಬೆಂಗಳೂರಿಗೆ ಹೋದರೆಂದು ಹಾಗೂ ಹಕ್ಕು ಬಿಟ್ಟ ಪತ್ರ ಅವರ ಅಕ್ಷರದಲ್ಲೇ ಇದ್ದು ಸ್ವತಃ ಅವರೇ ಬರೆದು ಕೊಟ್ಟರೆಂದು ಹಾಗೂ ದಾವಾ ಸ್ವತ್ತುಗಳ ಮೇಲೆ ಅವರಿಗಿದ್ದ ಹಕ್ಕನ್ನು **15.01.1978** ರಂದು **1** ನೇ ಪ್ರತಿವಾದಿ ಲಕ್ಷ್ಮೀಪತಿಯಪ್ಪನವರ ಹೆಸರಿಗೆ ಹಕ್ಕು ಬಿಟ್ಟು ಕೊಟ್ಟಿದ್ದಾರೆಂದು ಸೂಚಿಸಿದಾಗ ವಾದಿ ಅಲ್ಲಗಳೆದಿರುತ್ತಾರೆ .

**20.** ಡಿ.ಡಬ್ಲೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ **15.01.1978** ರಂದು ವಾದಿಯು ದಾವಾ ಶೆಡ್ಯೂಲ್ ಆಸ್ತಿಯನ್ನು ವಿಭಾಗ ಮಾಡಿಕೊಂಡು ಒಟ್ಟು ಕುಟುಂಬದಿಂದ ಹೊರಗೆ ಹೋಗಿದ್ದಾರೆ ಎಂದು ಸಾಕ್ಷಿ ನುಡಿದಿದ್ದು ಅವರು ತಮ್ಮ ಪಾಟೀ ಸವಾಲಿನಲ್ಲಿ ಅವರ ದೊಡ್ಡಪ್ಪ ಸ್ಟ್ಯಾಂಪ್ ಪೇಪರ್ ಮೇಲೆ ಬರೆದುಕೊಟ್ಟ ಆಧಾರದ ಮೇಲೆ ಅವರ ತಂದೆಗೆ ಆಗಿದೆ

ಎಂದು ಆ ದಾಖಲಾತಿಗಳು ನ್ಯಾಯಾಲಯದಲ್ಲಿ ಇದೆಯೆಂದು ಅದನ್ನು ತಂದು ಹಾಜರುಪಡಿಸಲು ತೊಂದರೆ ಇಲ್ಲವೆಂದು ನುಡಿದಿದ್ದು

21. ಪ್ರತಿವಾದಿಯವರು ಇದನ್ನು ಪುರಾವೆಗೊಳಿಸಲು ನ್ಯಾಯಾಲಯದ ಸಮಕ್ಷಮ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಆಸ್ತಿಯನ್ನು ವರ್ಗಾವಣೆ ಮಾಡಬೇಕಾದಲ್ಲಿ ಕಾನೂನು ಬದ್ಧವಾಗಿ, ನೋಂದಾಯಿತ ದಾಖಲಾತಿಗಳ ಮೂಲಕ ವರ್ಗಾವಣೆ ಆಗಬೇಕಾಗುತ್ತದೆ. ವಾದಿ ಎಲ್ಲಿಯೂ ಕೂಡ ತಾನು ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುವುದಾಗಿ ಒಪ್ಪಿ ಕೊಂಡಿರುವುದಿಲ್ಲ. ಅಲ್ಲದೇ ಪ್ರತಿವಾದಿಯವರು ಬ್ಯಾಂಕಿನ ಸಾಲದಿಂದ ಆಸ್ತಿಯು ಹರಾಜಿಗೆ ಬಂದಿದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯು ಎಲ್ಲಿಯೂ ಕೂಡ ವಾದಿಯು 1 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

22. ಹಕ್ಕು ವರ್ಗಾವಣೆಯಾಗಲು ಕಾನೂನಿನ ಪ್ರಕಾರ ಮಾನ್ಯವಾದ ನೊಂದಾಯಿತ ದಾಖಲಾತಿಗಳು ಅಥವಾ ಕಾನೂನಾತ್ಮಕ ಹಂಚಿಕೆ ಅಗತ್ಯವಿದ್ದು ಅವುಗಳ ಅಭಾವದಲ್ಲಿ ಇತರ ಸದಸ್ಯರು ಅವರ ಹಕ್ಕನ್ನು ತಮ್ಮದಾಗಿಸಿಕೊಂಡಿರುವುದು ಕಾನೂನಾತ್ಮಕವಾಗಿ ಮಾನ್ಯವಾಗುವುದಿಲ್ಲ , ಪ್ರತಿವಾದಿಯವರು ವಾದಿಯು ತನ್ನ ಹಕ್ಕನ್ನು ಬಿಟ್ಟು ಕೊಟ್ಟಿದ್ದಾಗಿ ಹೇಳುತ್ತಿದ್ದು ಆದರೆ ಅದನ್ನು ಪುರಾವೆಗೊಳಿಸಲು ಯಾವುದೇ ದಾಖಲಾತಿಗಳನ್ನು ನೀಡಿಲ್ಲ , ಆದರೆ ಆ ಹೇಳಿಕೆಯನ್ನು ಸಮರ್ಥಿಸುವ ಯಾವುದೇ ದಾಖಲಾತಿಗಳು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಹಕ್ಕು ಬಿಟ್ಟು ಕೊಡುವುದು ಕಾನೂನುಬದ್ಧವಾಗಿ ಅವುಗಳನ್ನು ಸಾಮಾನ್ಯ ವಾಗಿ ನೊಂದಾಯಿತ ದಾಖಲಾತಿಗಳ ಮೂಲಕ ಮಾಡಲೇ ಬೇಕಾಗುತ್ತದೆ ಅಂತಹ ಹೇಳಿಕೆಗಳು ಕೇವಲ ಬಾಯಿ

ಮಾತಿನ ಹೇಳಿಕೆಗಳಾಗಿದ್ದು ಕಾನೂನಾತ್ಮಕವಾಗಿ ಮಾನ್ಯವಾಗುವುದಿಲ್ಲ, ನೊಂದಾಯಿತ ದಾಖಲಾತಿಗಳು ಆಗದಿದ್ದಲ್ಲಿ ಆ ದಾಖಲಾತಿಗಳ ವಿಶ್ವಾಸಾರ್ಹತೆಯನ್ನು ಕುಂದಿಸುತ್ತದೆ. ಮೌಖಿಕ ವಿಭಜನೆಯು ಮಾನ್ಯವಾಗಿದ್ದು ಆದರೆ ಮೌಖಿಕ ವಿಭಜನೆಯಾಗಿದೆ ಎನ್ನುವುದನ್ನು ಸಮರ್ಥಿಸಲು ಮತ್ತು ಅದು ಜಾರಿಗೆ ಬರುತ್ತದೆ ಎನ್ನುವ ಕುರಿತು ದಾಖಲಾತಿಗಳನ್ನು ಹಾಜರುಪಡಿಸಬೇಕಾಗುತ್ತದೆ. 1 ನೇ ಪ್ರತಿವಾದಿಯವರು ವಿಭಜನೆ ಮೂಲಕ ಹಕ್ಕು ವರ್ಗಾವಣೆಯಾಗಿದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ .

23. ದಾವಾ ಶೆಡ್ಯೂಲ್ ಐಟಂ ನಂ. 1 ರ ಬಾಬ್ತು ವಾದಿಯು ನಿಪಿ-1 ದಾಖಲಾತಿಯನ್ನು ಹಾಜರುಪಡಿಸಿದ್ದು ಆ ದಾಖಲಾತಿಯು ಸರ್ವೆ ನಂ. 16/1 ರ ಪಹಣಿ ಪತ್ರಿಕೆಯಾಗಿದ್ದು, ಆ ದಾಖಲಾತಿಯಲ್ಲಿ ಕಬ್ಜೇದಾರ ಅಥವಾ ಸ್ವಾಧೀನದಾರನ ಹೆಸರು ಮತ್ತು ವಿಳಾಸ ಉಗ್ರಪ್ಪ ಬಿನ್ ದಾಸಪ್ಪ ಎಂದು ನಮೂದಾಗಿರುತ್ತದೆ. ನಿಪಿ-5 ಸರ್ವೆ ನಂ. 16/1 ರ ದಾಖಲಾತಿಯಾಗಿದ್ದು ಆ ದಾಖಲಾತಿಯಲ್ಲಿ ಕಬ್ಜೇದಾರ ಅಥವಾ ಸ್ವಾಧೀನದಾರನ ಹೆಸರು ಮತ್ತು ವಿಳಾಸ ನಾಗವೇಣಿ ಬಿನ್ ಲಕ್ಷ್ಮೀಪತಿಯಪ್ಪ ಎಂದು ನಮೂದಾಗಿರುತ್ತದೆ.

24. ದಾವಾ ಅನುಸೂಚಿ -2 ಸರ್ವೆ ನಂ. 16/2 ರ ಬಾಬ್ತು ವಾದಿಯು ನಿಪಿ-3 ಸರ್ವೆ ನಂ. 16/2 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಆ ದಾಖಲಾತಿಯಲ್ಲಿ ಕಬ್ಜೇದಾರ ಅಥವಾ ಸ್ವಾಧೀನದಾರನ ಹೆಸರು ಮತ್ತು ವಿಳಾಸ ಹೊಟ್ಟೆ ಕರಿಯಪ್ಪ ಬಿನ್ ಕೆಂಚಣ್ಣ ಎಂದು ನಮೂದಾಗಿರುತ್ತದೆ. ನಿಪಿ-4 ಉಪ ತಹಶೀಲ್ದಾರ್ , ಜವನಗೊಂಡನಹಳ್ಳಿ ಇವರಿಗೆ ಹೊಟ್ಟೆ ಕರಿಯಪ್ಪ ಬಿನ್ ಕೆಂಚಪ್ಪ ಇವರ ಪೌತಿ ವಾರುಸದಾರಾಗಿ ಲಕ್ಷ್ಮೀಪತಿಯಪ್ಪ ಬಿನ್ ಉಗ್ರಪ್ಪ ಇವರು ಸಲ್ಲಿಸಿರುವ ಪೌತಿ ಖಾತೆ ಆದೇಶ ಪ್ರತಿಯಾಗಿರುತ್ತದೆ. ಆ ದಾಖಲಾತಿಯು ಐಟಂ ನಂ, 2

ಆಸ್ತಿಯ ಮ್ಯುಟೇಷನ್ ರಿಜಿಸ್ಟರ್ ಆಗಿದ್ದು ಆ ರಿಜಿಸ್ಟರ್ 1997 ರ ರಿಜಿಸ್ಟರ್ ಆಗಿದ್ದು, ಅದನ್ನು ಗಮನಿಸಿದಾಗ ಐಟಂ ನಂ. 2 ಆಸ್ತಿಯು ಹೊಟ್ಟೆಕರಿಯಪ್ಪನ ಹೆಸರಿಗೆ ಇದ್ದು ಅವರು ತೀರಿಕೊಂಡ ನಂತರ ಅವರ 1 ನೇ ಮಗಳ ಮಕ್ಕಳಾದ ಕೆಂಚಪ್ಪ ಹಾಗೂ ಕೃಷ್ಣಪ್ಪ ಸಮ್ಮತಿ ಬರೆದು ಕೊಟ್ಟಿರುತ್ತಾರೆಂದು ದಾವಾಸ್ತಿಯನ್ನು ಹೇಮಾರೆಡ್ಡಿ ಮತ್ತು ಲಕ್ಷ್ಮೀಪತಿಯವರ ಹೆಸರಿಗೆ ಖಾತೆ ಮಾಡುವ ಬಗ್ಗೆ ಯಾವುದೇ ಅಭ್ಯಂತರ ಬಾರದೇ ಇದ್ದುದರಿಂದ ಖಾತೆ ಬದಲಾವಣೆ ಆಗಲು ಆದೇಶ ಮಾಡಿದ ಬಗ್ಗೆ ಉಲ್ಲೇಖವಿರುತ್ತದೆ. ನಿಪಿ–6 ಪಹಣಿ ಪತ್ರಿಕೆಯನ್ನು ಗಮನಿಸಿದಾಗ ಐ ಹೆಚ್ ಸಿ ನಂ.3/96–97 ರಂತೆ ವಾದಿ ಮತ್ತು 1 ನೇ ಪ್ರತಿವಾದಿಯರ ಹೆಸರಲ್ಲಿ ಸರ್ವೆ ನಂ. 16/2 ರ ಕಾಲಂ ನಂ.9 ರಲ್ಲಿ ಹೆಸರು ಬದಲಾವಣೆಯಾಗಿರುವುದು ಕಂಡು ಬರುತ್ತದೆ.

25. ಮೇಲ್ಮನವಿಯನ್ನು ಗಮನಿಸಿದಾಗ ಆರ್.ಎ.ನಂ.46/2020 ರಲ್ಲಿ ಈ ನ್ಯಾಯಾಲಯವು ಹೊಟ್ಟೆಕರಿಯಪ್ಪ ಇವರ ವಾರಸುದಾರರನ್ನು ಈ ದಾವೆಯಲ್ಲಿ ಸೇರ್ಪಡೆ ಗೊಳಿಸಬೇಕೆಂದು ಆದೇಶ ಮಾಡಿದ್ದು, ವಾದಿಯರು 4 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಕರಿಯಪ್ಪನವರ ವಾರಸುದಾರರೆಂದು ಸೇರ್ಪಡೆಗೊಳಿಸಿರುತ್ತಾರೆ. ಸಾಕ್ಷಿಯ ವಿಚಾರಣೆಯನ್ನು ಗಮನಿಸಿದಾಗ 4 ನೇ ಪ್ರತಿವಾದಿಯು ಹೊಟ್ಟೆಕರಿಯಪ್ಪನ ಮೊಮ್ಮಗನಾಗಿರುತ್ತಾರೆ ಎಂದು ಕಂಡುಬರುತ್ತದೆ. ಐಟಂ ನಂ.2 ಆಸ್ತಿಯು ಮೂಲತಃ ಕರಿಯಪ್ಪನ ಆಸ್ತಿ ಎನ್ನುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಪಿ ಡಬ್ಲ್ಯೂ–1 ರವರು ತಮ್ಮ ಪಾಟೀ ಸವಾಲಿನಲ್ಲಿ ಹೊಟ್ಟೆ ಕರಿಯಪ್ಪನಿಗೆ ಗಂಡು ಮಕ್ಕಳು ಇಲ್ಲದ ಕಾರಣ ಅವರು ಮೃತ ಪಟ್ಟಾಗ ಅವರ ತಂದೆ ಶ್ರಾಸ್ತ ಮಾಡಿದ್ದರಿಂದ 2 ಎಕರೆ 30 ಗುಂಟೆ ಜಮೀನಿನಲ್ಲಿ ಅವರಿಗೆ ಹಕ್ಕು ಇದೆ ಎಂದು ನುಡಿದಿದ್ದು, ಆದರೆ ಎಲ್ಲಿಯೂ ಕೂಡ ಹೊಟ್ಟೆಕರಿಯಪ್ಪ ಈ ರೀತಿಯಾಗಿ ಅವರ ಶ್ರಾದ್ಧ ಮಾಡಿದಲ್ಲಿ ಅವರಿಗೆ ಆಸ್ತಿ ವರ್ಗಾವಣೆ ಆಗುತ್ತದೆಂದು ಯಾವುದೇ ದಾಖಲಾತಿಗಳನ್ನು ಬರೆದಿಟ್ಟಿರುವುದಿಲ್ಲ. ಆಸ್ತಿಗಳ

ಮಾಲೀಕತ್ವ ಕಾನೂನು ಬದ್ಧವಾಗಿ ವರ್ಗಾವಣೆ ಆಗಬೇಕಾಗುತ್ತದೆ. ಹೀಗಿರುವಾಗ ಆ ಆಸ್ತಿಯನ್ನು ಪಾಲು ಮಾಡಿಕೊಳ್ಳುವ ಅಧಿಕಾರವಾಗಲೀ ಅಥವಾ ಹಸ್ತಾಂತರಿಸುವ ಅಧಿಕಾರವಾಗಲೀ ಯಾರಿಗೂ ಇದ್ದಿರುವುದಿಲ್ಲ. ಕೇವಲ ತಿಥಿ ಕರ್ಮಾಂತರವನ್ನು ಮಾಡಿದಲ್ಲಿ ಆಸ್ತಿಯ ಮಾಲೀಕತ್ವ ವರ್ಗಾವಣೆ ಆಗಲು ಸಾಧ್ಯವಿಲ್ಲ, ಕೇವಲ ಖಾತೆ ಬದಲಾವಣೆ ಮಾಡಲು ಒಪ್ಪಿ ಕೊಟ್ಟ ಮಾತ್ರಕ್ಕೆ ಮಾಲೀಕತ್ವದ ಹಕ್ಕು ವರ್ಗಾವಣೆಯಾಗುವುದಿಲ್ಲ .

26. ಹೊಟ್ಟೆಕರಿಯಪ್ಪನ ಆಸ್ತಿಯು ವಾದಿ ಮತ್ತು 1 ನೇ ಪ್ರತಿವಾದಿಯವರಿಗೆ ಮಾಲೀಕತ್ವದ ಆಧಾರದ ಮೇಲೆ ಹಕ್ಕು ವರ್ಗಾವಣೆಯಾಗಿದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಕಾನೂನು ಬದ್ಧವಾಗಿ ನೊಂದಾಯಿತ ದಾಖಲಾತಿಯ ಆಧಾರದ ಮೇಲೆ ಹಕ್ಕು ಬದಲಾವಣೆ ಕುರಿತು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಸಮಕ್ಷಮ ಇರದೇ ಇರುವುದರಿಂದ ಮತ್ತು ಹೊಟ್ಟೆಕರಿಯಪ್ಪನ ವಾರಸುದಾರರಾಗಿ 4 ನೇ ಪ್ರತಿವಾದಿ ಇದ್ದುದರಿಂದ ವಾದಿಗಳಿಗಾಗಲೇ ಪ್ರತಿವಾದಿಗಳಿಗಾಗಲೀ ದಾವಾ ಶೆಡ್ಯೂಲ್ 2 ರ ಆಸ್ತಿಯಲ್ಲಿ ಯಾವುದೇ ಹಕ್ಕು ವರ್ಗಾವಣೆ ಯಾಗಿರುವುದಿಲ್ಲ. ಸ್ವತಃ ವಾದಿಯರೇ ಆ ಆಸ್ತಿ ಹೊಟ್ಟೆ ಕರಿಯಪ್ಪನ ಆಸ್ತಿಯೆಂದು ಒಪ್ಪಿ ಕೊಂಡಿರುತ್ತಾರೆ. ಆದ್ದರಿಂದ ಆ ಆಸ್ತಿಯಲ್ಲಿ ಕರಿಯಪ್ಪನ ವಾರಸುದಾರರಾದ 4 ನೇ ಪ್ರತಿವಾದಿ ಹೊರತು ಪಡಿಸಿ ಉಳಿದ ಯಾರಿಗೂ ಕೂಡ ಹಕ್ಕು ವರ್ಗಾವಣೆ ಆಗುವುದಿಲ್ಲ.

27. ಐಟಂ ನಂ. 3 ಆಸ್ತಿಯ ಬಾಬ್ತು ವಾದಿಯು ನಿಪಿ –2 ನ್ನು ಹಾಜರುಪಡಿಸಿದ್ದು ಆ ದಾಖಲಾತಿಯು ಸರ್ವೆ ನಂ. 16/3 ರ ಪಹಣಿ ಪತ್ರಿಕೆಯಾಗಿದ್ದು ಆ ದಾಖಲಾತಿಯಲ್ಲಿ ಕಬ್ಜೇದಾರ ಅಥವಾ ಸ್ವಾಧೀನದಾರನ ಹೆಸರು ಮತ್ತು ವಿಳಾಸ ಉಗ್ರಪ್ಪ ಬಿನ್ ದಾಸಪ್ಪ ಎಂದು ನಮೂದಾಗಿರುತ್ತದೆ. ನಿಪಿ.11 ಮ್ಯುಟೇಷನ್ ರಿಜಿಸ್ಟರ್ ಐಟಂ ನಂ. 3 ಕ್ಕೆ ಸಂಬಂಧಪಟ್ಟಿದ್ದು ಆ

ದಾಖಲಾತಿಗಳ ಪ್ರಕಾರ ಬಿ ವೆಂಕಟಾಚಾಲಶೆಟ್ಟಿ ಇವರಿಂದ ಲಕ್ಷೀಪತಿಯಪ್ಪ ಮತ್ತು ಜಿಎಲ್ ನರಸಿಂಹಮೂರ್ತಿ ಇವರಿಗೆ ಕ್ರಯ ಎಂದು ನಮೂದಾಗಿರುತ್ತದೆ . ಆದರೆ ಪ್ರತಿವಾದಿಯವರು ಆ ಆಸ್ತಿಗೆ ಸಂಬಂದಪಟ್ಟ ಯಾವುದೇ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ, ನಿಪಿ-8 ಐಟಂ ನಂ. 3 ಕ್ಕೆ ಸಂಬಂಧಪಟ್ಟಂತಹ ಕ್ರಯ ಪತ್ರವಾಗಿದ್ದು ಆ ದಾಖಾತಿಯಲ್ಲಿ 1 ನೇ ಪ್ರತಿವಾದಿ ಮತ್ತು ನರಸಿಂಹಮೂರ್ತಿ ಸರ್ವೆ ನಂ. 16/3 ರಲ್ಲಿ 3 ಎಕರೆ 14 ಗುಂಟೆ ಜಮೀನನ್ನು 2 ನೇ ಪ್ರತಿವಾದಿಗೆ ದಿ 15.10.1998 ರ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುವುದು ಕಂಡುಬಂದಿರುತ್ತದೆ. ಇದನ್ನು ಗಮನಿಸಿದಾಗ 1998 ರಲ್ಲಿ ದಾವಾ ಷ್ಡೂಲ್ -3 ರಲ್ಲಿ ಅರ್ಧಾಂಶ ಹಿಸೆಯನ್ನು ಮಾರಾಟ ಮಾಡಿರುವುದು ಕಂಡು ಬಂದಿರುತ್ತದೆ.

28. ನಿಡಿ-11 ಓಎಸ್ .33/2012 ರ ತೀರ್ಪಿನ ಪ್ರತಿಯಾಗಿದ್ದು ಆ ತೀರ್ಪನ್ನು ಗಮನಿಸಿದಾಗ ದಿ.15.10.1998 ರಂದು ದಾವಾ ಶೆಡ್ಯೂಲ್ ಐಟಂ ನಂ.3 ರಲ್ಲಿ 3 ಎಕರೆ 14 ಗುಂಟೆಯನ್ನು ಮಾರಾಟ ಮಾಡಿದ್ದು ಇದು ದಿಃ 20.12.2004 ರ ಪೂರ್ವದಲ್ಲಿ ಮಾರಾಟವಾಗಿದ್ದರಿಂದ ಆ ದಾವೆಯ ವಾದಿಗಳಿಗೆ ಅದನ್ನು ಪ್ರಶ್ನಿಸುವಂತಹ ಯಾವುದೇ ಹಕ್ಕು ಇಲ್ಲವೆಂದು ನ್ಯಾಯಾಲಯವು ತೀರ್ಮಾನಕ್ಕೆ ಬಂದಿರುವುದು ಕಂಡುಬರುತ್ತದೆ. ಒಂದು ವೇಳೆ ಒಟ್ಟು ಕುಟುಂಬದ ಆಸ್ತಿಯನ್ನು ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡುವ ಅಧಿಕಾರ ಕುಟುಂಬವನ್ನು ನಿರ್ವಹಿಸುವ ವ್ಯಕ್ತಿಗೆ ಖಂಡಿತವಾಗಿಯೂ ಇರುತ್ತದೆ.

29. ನಿಪಿ-7 ಸರ್ವೆ ನಂ. 16/3 ರ ದಾಖಲಾತಿಯಾಗಿದ್ದು ಆ ದಾಖಲಾತಿಯಲ್ಲಿ ಕಬ್ಜೇದಾರ ಅಥವಾ ಸ್ವಾಧೀನದಾರನ ಹೆಸರು ಮತ್ತು ವಿಳಾಸ ಜಿ. ಎಲ್. ನರಸಿಂಹಮೂರ್ತಿ ಬಿನ್ ಲಕ್ಷ್ಮೀಪತಿಯಪ್ಪ, ಕೆಂಚಮ್ಮ ಕೋಂ ಕಾರನಾಗಪ್ಪ ಎಂದು ನಮೂದಾಗಿರುತ್ತದೆ. ನಿಪಿ-8 ದಾಖಲಾತಿಯು ದಿನಾಂಕ.15.10.1998 ರಂದು ಲಕ್ಷ್ಮೀಪತಿಯಪ್ಪ ಮತ್ತು ಆತನ ಮಗ

ಎಲ್.ನರಸಿಂಹಮೂರ್ತಿ ಇವರು ಕೆಂಚಮ್ಮ ಕೋಂ ಕಾರನಾಗಪ್ಪ ಇವರಿಗೆ ಬರೆದು ಕೊಟ್ಟ ಶುದ್ಧ ಕ್ರಯ ಪತ್ರ ಅಗಿರುತ್ತದೆ. ನಿಪಿ–9 ದಿನಾಂಕ.17.01.2013 ರಂದು ಲಕ್ಷ್ಮೀಪತಿಯಪ್ಪ ಬಿನ್ ಉಗ್ರಪ್ಪ ಇವರು ತನ್ನ ಮಗಳಾದ ನಾಗವೇಣಿ ಇವರಿಗೆ ಬರೆದು ಕೊಟ್ಟ ದಾನಪತ್ರ ಆಗಿರುತ್ತದೆ. ನಿಪಿ–10 1998–99 ರ ಎಂ.ಆರ್. ನಂ. 2, ಸರ್ವೆ ನಂ. 16/39 ರ ದಾಖಲಾತಿಯಾಗಿದ್ದು, ಲಕ್ಷ್ಮೀಪತಿಯಪ್ಪ ನರಸಿಂಹಮೂರ್ತಿ ಇವರಿಂದ ಕೆಂಚಮ್ಮ ಕೋಂ ಕಾರನಾಗಪ್ಪ ಇವರಿಗೆ ಕ್ರಯ ಆದ ಬಗ್ಗೆ ನಮೂದು ಇರುತ್ತದೆ.

30. ನಿಪಿ–12 ಸರ್ವೆ ನಂ. 16/1 ರ ಮ್ಯುಟೇಷನ್ ರಿಜಿಸ್ಟರ್ ಪ್ರತಿಯಾಗಿದ್ದು, ಇದರಲ್ಲಿ ದಿನಾಂಕ.17.01.2013 ರ ಲಕ್ಷ್ಮೀಪತಿಯಪ್ಪ ಬಿನ್ ಉಗ್ರಪ್ಪ ಇವರು ತನ್ನ ಮಗಳಾದ ನಾಗವೇಣಿ ಇವರಿಗೆ ಬರೆದು ಕೊಟ್ಟ ದಾನಪತ್ರದ ಆಧಾರದ ಮೇಲೆ ಹಕ್ಕು ಬದಲಾವಣೆ ಆದ ದಾಖಲಾತಿ ಆಗಿರುತ್ತದೆ. ನಿಪಿ–13 ಆರ್.ಎ. ನಂ. 63/92–93 ರಲ್ಲಿ ಉಪವಿಭಾಗಾಧಿಕಾರಿ ಮಾಡಿದ ಆದೇಶದ ದೃಢೀಕೃತ ನಕಲು ಆಗಿರುತ್ತದೆ.

31. ನಿಡಿ–1 ದಾಖಲಾತಿಯು ಹಕ್ಕು ಖುಲಾಸೆ ದಾಖಲಾತಿಯಾಗಿದ್ದು, ದಿನಾಂಕ.18.03.2023 ರಲ್ಲಿ ಧನಲಕ್ಷ್ಮಿ ಬಿನ್ ಲೇ. ಲಕ್ಷ್ಮೀಪತಿಯಪ್ಪನವರಿಗೆ ಸುನಂದ ಕೋಂ ನರಸಿಂಹಮೂರ್ತಿ ಇವರು ಬರೆದು ಕೊಟ್ಟ ಹಕ್ಕು ಖುಲಾಸೆ ಪತ್ರವಾಗಿರುತ್ತದೆ ನಿಡಿ–2 ದಾನಪತ್ರದ ಮೂಲ ಪ್ರತಿಯಾಗಿರುತ್ತದೆ. ನಿಪಿ.9 ಆದಾಖಲಾತಿಯ ಧೃಢೀಕೃತ ನಕಲಾಗಿರುತ್ತದೆ. ನಿಡಿ–3 ಮತ್ತು ನಿಪಿ.8 ಕ್ರಯಪತ್ರದ ಧಢೀಕೃತ ನಕಲಾಗಿರುತ್ತದೆ . ನಿಡಿ–4 ಸರ್ವೆ ನಂ. 16/*/3 ರ ರಂಗಮ್ಮ ಕೋಂ ಲೇ ಲಕ್ಷೀಪತಿಯಪ್ಪ, ಸುನಂದಮ್ಮ ಕೋಂ ಲೇ ಜಿ ಎಲ್ ನರಸಿಂಹಮೂರ್ತಿ ಇವರ ಹೆಸರಿನಲ್ಲಿರುವ ಮ್ಯುಟೇಷನ್ ರಿಜಿಸ್ಟರ್ ಪ್ರತಿಯಾಗಿದ್ದು ಆಗಿರುತ್ತದೆ. ನಿಡಿ–5 ಸರ್ವೆ ನಂ. 16/5 ರ ಕೆಂಚಮ್ಮ ಕೋಂ ಕಾರನಾಗಪ್ಪ ಇವರ ಹೆಸರಿನಲ್ಲಿರುವ ರಶೀದಿ

ಪಟ್ಟಾ ಆಗಿರುತ್ತದೆ. ನಿಡಿ-6 ಕಾರನಾಗಪ್ಪ ಇವರು ಸರ್ಕಾರಕ್ಕೆ ಸಲ್ಲಿಸಿರುವ ಕಂದಾಯ ಪಾವತಿ ರಶೀದಿ ಆಗಿರುತ್ತದೆ. ಆ ರಶೀದಿಯು 2004 ನೇ ಇಸವಿಗೆ ಸಂಬಂದಪಟ್ಟಂತಹ ದಾಖಲಾತಿಯಾಗಿರುತ್ತದೆ .

**32.** ನಿಡಿ-7 ಸರ್ವೆ ನಂ. 16/6 ರಲ್ಲಿ ಕೆಂಚಮ್ಮ ಕೋಂ ಕಾರನಾಗಪ್ಪ ಇವರು ಸರ್ಕಾರಕ್ಕೆ ಸಲ್ಲಿಸಿರುವ ಕಂದಾಯ ಪಾವತಿ ರಶೀದಿ ಆಗಿರುತ್ತದೆ. ನಿಡಿ-8 ಸರ್ವೆ ನಂ. 16/5 ರ ಪಹಣಿ ಪತ್ರಿಕೆಯಾಗಿದ್ದು ಆ ದಾಖಲಾತಿಯಲ್ಲಿ ಕಬ್ಜೇದಾರ ಅಥವಾ ಸ್ವಾಧೀನದಾರನ ಹೆಸರು ಮತ್ತು ವಿಳಾಸ ಕೆಂಚಮ್ಮ ಕೋಂ ಕಾರನಾಗಪ್ಪ ಎಂದು ನಮೂದಾಗಿರುತ್ತದೆ. ನಿಡಿ-9 ಕೂಡ ಸರ್ವೆ ನಂ. 16/5 ರ ಪಹಣಿ ಪತ್ರಿಕೆಯಾಗಿದ್ದು ಆ ದಾಖಲಾತಿಯಲ್ಲಿ ಕಬ್ಜೇದಾರ ಅಥವಾ ಸ್ವಾಧೀನದಾರನ ಹೆಸರು ಮತ್ತು ವಿಳಾಸ ಕೆಂಚಮ್ಮ ಕೋಂ ಕಾರನಾಗಪ್ಪ ಎಂದು ನಮೂದಾಗಿರುತ್ತದೆ. ನಿಡಿ-10 ಗ್ರಾಮ ನಮೂನೆ -1 ದಾಖಲಾತಿಯಾಗಿದ್ದು, ಸರ್ವೆ ನಂ. 16/2 ಲಕ್ಷ್ಮೀಪತಿಯಪ್ಪ ಮತ್ತು ಹೇಮರೆಡ್ಡಿ ಇವರ ಹೆಸರಿನಲ್ಲಿ ಮತ್ತು 16/3 ರಲ್ಲಿ ಕೆಂಚಮ್ಮ ಕೋಂ ಕಾರನಾಗಪ್ಪ ಇವರ ಹೆಸರಿನಲ್ಲಿ ನಮೂದು ಇರುತ್ತದೆ. ನಿಡಿ-12 ಓ ಎಸ್ 33/2012 ರ ಡಿಕ್ರಿ ದೃಢೀಕೃತ ಪ್ರತಿಯಾಗಿರುತ್ತದೆ. ನಿಡಿ-13 ಓ ಎಸ್ 150/2013 ರ ಆದೇಶ ಪುಟದ ದೃಢೀಕೃತ ಪ್ರತಿಯಾಗಿರುತ್ತದೆ. ನಿಡಿ-14 ಓ ಎಸ್ 150/2013 ರ ದಾವಾ ಅರ್ಜಿ ದೃಢೀಕೃತ ಪ್ರತಿಯಾಗಿರುತ್ತದೆ. ನಿಡಿ-15 ಓ ಎಸ್ 150/2013 ರ ಲಿಖಿತ ಹೇಳಿಕೆಯ ದೃಢೀಕೃತ ಪ್ರತಿಯಾಗಿರುತ್ತದೆ.

**33.** ಡಿ.ಡಬ್ಲೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಅವರ ತಾತನಿಗೆ ಇಬ್ಬರು ಗಂಡು ಮಕ್ಕಳು ಇದ್ದು ಅವರುಗಳು ಲಕ್ಷ್ಮೀಪತಿ ಮತ್ತು ಹೇಮರೆಡ್ಡಿ ಎಂದು, ಸಾಲ ಇತ್ತು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿಲ್ಲವೆಂದು, ದಾವಾ ಆಸ್ತಿಗಳು ಅವರ ತಂದೆಯ

ಹೆಸರಿಗೆ ಬರುವ ಪೂರ್ವದಲ್ಲಿ ಅವರ ತಾತನ ಹೆಸರಿಗೆ ಇತ್ತು ಎಂದು, ಅವರ ತಂದೆಗೆ ಆಸ್ತಿಗಳು ಬಂತು ಎಂದು ತೋರಿಸಲು ದಾಖಲಾತಿಗಳು ಹಾಜರುಪಡಿಸಿಲ್ಲವೆಂದು ವಾದಿಯು ಜಮೀನು ಬೇಡ ಬ್ಯಾಂಕ್ ನ ಸಾಲ ಪಾವತಿಸಿ ಎಂದು ಹೇಳಿದ್ದರೂ ಬ್ಯಾಂಕ್ ನ ಸಾಲಕ್ಕೆ ಆಸ್ತಿ ಹರಾಜು ಬಂದಾಗ ಅವರ ದೊಡ್ಡಪ್ಪ ಸ್ಟಾಂಪ್ ಪೇಪರ್ ಮೇಲೆ ಬರೆದುಕೊಟ್ಟ ಆಧಾರದ ಮೇಲೆ ಅವರ ತಂದೆಗೆ ಆಗಿದೆ ಎಂದು ನುಡಿದಿರುತ್ತಾರೆ.

34. ಪಿ ಡಬ್ಲ್ಯು-1 ರವರಿಗೆ ಪಾಟೀ ಸವಾಲು ಮಾಡಿದಾಗ ಅವರು ಪಿ ಎಲ್ ಡಿ ಬ್ಯಾಂಕ್ ನ ಸಾಲವನ್ನು ಅವರು ತೀರುವಳಿ ಮಾಡಿದರೆಂದು, ದಾವಾ ಐಟಂ ನಂ.2 ಸರ್ವೆ ನಂ. 16/2 ಮೊದಲು ಹೊಟ್ಟೆಕರಿಯಪ್ಪನ ಆಸ್ತಿ ಎಂದರೆ ಸರಿ ಎಂದು, ಹೊಟ್ಟೆಕರಿಯಪ್ಪ ಮತ್ತು ಆತನ ಇಬ್ಬರು ಹೆಣ್ಣುಮಕ್ಕಳು ಮೃತ ಪಟ್ಟಿರುತ್ತಾರೆಂದು ಹೊಟ್ಟೆಕರಿಯಪ್ಪನಿಗೆ ಷಣ್ಮುಖ ಮೊಮ್ಮಗನಾಗಬೇಕೆಂದು, 2 ನೇ ಪ್ರತಿವಾದಿ ಕೆಂಚಮ್ಮನಿಗೆ 3 ಎಕರೆ 14 ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

35. ನಿಡಿ-11 ನ್ನು ಗಮನಿಸಿದಾಗ ಈ ದಾವೆಯ ಪ್ರತಿವಾದಿ 1(ಡಿ), 1(ಬಿ), 1(ಸಿ) ಇವರುಗಳು 1 ನೇ ಪ್ರತಿವಾದಿ, 2 ನೇ ಪ್ರತಿವಾದಿ, ಮತ್ತು 1(ಇ) ಪ್ರತಿವಾದಿ ವಿರುದ್ಧ ದಾವಾ ಶೆಡ್ಯೂಲ್ ಆಸ್ತಿಯಲ್ಲಿ ವಿಭಜನೆ ಕೋರಿ ಮತ್ತು 1 ನೇ ಪ್ರತಿವಾದಿಯು 15.10.1998 ರಲ್ಲಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯ ಪತ್ರವು ಅವರಿಗೆ ಬಂಧನಕಾರಿಯಾಗಿರುವುದಿಲ್ಲವೆಂದು ಹಾಗೂ ಉಳಿದ ಆಸ್ತಿಗಳು ಅವರ ಪಿತ್ರಾರ್ಜಿತ ಆಸ್ತಿಯೆಂದು ಪರಿಗಣಿಸಿ ಮಾರಾಟ ಮಾಡಿದ ಆಸ್ತಿಯನ್ನು ಹೊರತುಪಡಿಸಿ ಉಳಿದ ಆಸ್ತಿಯಲ್ಲಿ ಅವರಿಗೆ ¼ ಹಿಸ್ಸೆಯನ್ನು ವಿಭಾಗ ಮಾಡಿಕೊಡಬೇಕೆಂದು ಕೋರಿಕೊಂಡಿದ್ದು, ಆ ದಾವೆಯು

ಭಾಗಶಃ ಡಿಕ್ರಿಯಾಗಿದ್ದು, ಮತ್ತು 2 ನೇ ಪ್ರತಿವಾದಿಗೆ ದಿ.15.10.1998 ರಂದು ಮಾರಾಟ ಮಾಡಿದ ಆಸ್ತಿಯಲ್ಲಿ ವಾದಿಗೆ ಯಾವುದೇ ಹಕ್ಕಿಲ್ಲವೆಂದು ತೀರ್ಮಾನಿಸಿರುವುದು ಕಂಡುಬರುತ್ತದೆ.

**36.** ಪಿ ಡಬ್ಲ್ಯು-1 ರವರು ತಮ್ಮ ಪಾಟೀ ಸವಾಲಿನಲ್ಲಿ ದಾವಾ ಐಟಂ ನಂ. 3 ನೇ ಸ್ವತ್ತು ಪಿಎಲ್‌ಡಿ ಬ್ಯಾಂಕ್ ಗೆ ಅಡಮಾನವಾಗಿತ್ತು ಎಂದರೆ ಸರಿ ಎಂದು, 1 ನೇ ಪ್ರತಿವಾದಿ ಹಾಗೂ ಅವರ ಮಗ ಎಲ್ ನರಸಿಂಹಮೂರ್ತಿ 2 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರದಲ್ಲಿ ಈ ವಿಚಾರ ಬರೆದಿರ ಬಹುದೆಂದು ಪಿಎಲ್‌ಡಿ ಬ್ಯಾಂಕ್ ನ ಸಾಲವನ್ನು ಅವರು ತೀರುವಳಿ ಮಾಡಿರುತ್ತಾರೆಂದು 1 ನೇ ಪ್ರತಿವಾದಿ ಹಾಗೂ ಆತನ ಮಗ 2 ನೇ ಪ್ರತಿವಾದಿಗೆ ಬರೆದುಕೊಟ್ಟ ದಿ.15.10.1998 ರ ಕ್ರಯ ಪತ್ರದಲ್ಲಿ ಬರೆದಿರಬಹುದೆಂದು ದಾವಾ ಐಟಂ ನಂ.3 ನೇ ಸ್ವತ್ತಿನ ಮೇಲೆ ಸಾಲ ಇದೆ ಅದನ್ನು ತೀರುವಳಿ ಮಾಡಿ ಎಂದು ಪಿ ಎಲ್ ಡಿ ಬ್ಯಾಂಕಿನಿಂದ ಅವರಿಗೆ ನೋಟೀಸು ಬಂದಿದ್ದು, ಆ ನೋಟೀಸ್ ಪ್ರತಿಯನ್ನು ಹಾಗೂ ಬ್ಯಾಂಕಿನ ಸಾಲವನ್ನು ಅವರೇ ತೀರುವಳಿ ಮಾಡಿದ ಬಗ್ಗೆ ಇರುವ ದಾಖಲೆಯನ್ನು ಅವರು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆಂದು ನುಡಿದಿರುತ್ತಾರೆ.

**37.** ನಿಪಿ-8 ಮತ್ತು ನಿಡಿ-3 ಕ್ರಯ ಪತ್ರದ ಧೃಢೀಕೃತ ನಕಲನ್ನು ಗಮನಿಸಿದಾಗ ವಾದಿಯರ ತಂದೆ ಉಗ್ರಪ್ಪನವರು ಪಿ ಎಲ್ ಡಿ ಬ್ಯಾಂಕ್ ಗೆ ಆಧಾರ ಮಾಡಿ ಸಾಲ ಮಾಡಿದ್ದು , ಆ ಸಾಲವನ್ನು ತೀರುವಳಿ ಮಾಡಿದ್ದು ಎಂದು ಉಲ್ಲೇಖವಿರುವುದು ಕಂಡು ಬಂದಿರುತ್ತದೆ. ಅದರ ಪ್ರಕಾರ 15.10.1998 ರಲ್ಲಿ ಆಸ್ತಿಯನ್ನು ಮಾರಾಟ ಮಾಡಿದ್ದು ಈ ದಾವೆಯನ್ನು 2014 ರಲ್ಲಿ ಸಲ್ಲಿಸಿದ್ದು ಸುಮಾರು 16 ವರ್ಷಗಳ ನಂತರ ಈ ದಾವೆಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ. ಕಲಂ 109 ಕಾಲ ಪರಿಮಿತಿ ಅಧಿನಿಯಮದ ಅಡಿಯಲ್ಲಿ ಮಿತಾಕ್ಷರಾ ಕಾನೂನಿನಿಂದ ಶಾಸಿಸಲ್ಪಡುವ ಒಬ್ಬ ಹಿಂದೂವಿನಿಂದ ತನ್ನ ತಂದೆಯು ಮಾಡಿರುವ ಪೂರ್ವಾರ್ಜಿತ ಸ್ವತ್ತಿನ

ಹಸ್ತಾಂತರಣವನ್ನು ರದ್ದುಗೊಳಿಸುವುದಕ್ಕಾಗಿ ಹಸ್ತಾಂತರಿಯು ಆ ಸ್ವತ್ತಿನ ಕಬ್ಜೆಯನ್ನು ಪಡೆದುಕೊಂಡ 12 ವರ್ಷದೊಳಗೆ ದಾವೆಯನ್ನು ಸಲ್ಲಿಸಬೇಕಾಗಿರುತ್ತದೆ.

38. ಪಿಡಬ್ಲ್ಯೂ-1 ರವರ ವಿಚಾರಣೆ ಗಮನಿಸಿದಾಗ ಕೂಡ ಬ್ಯಾಂಕ್ ನಲ್ಲಿ ಆ ಆಸ್ತಿಯ ಮೇಲೆ ಸಾಲ ಮಾಡಿರುವುದು ಕಂಡು ಬಂದಿರುತ್ತದೆ. ಹೀಗಿರುವಾಗ ಆ ಸಾಲದ ಮರುಪಾವತಿ ಸಲುವಾಗಿ ಮತ್ತು ಕುಟುಂಬದ ಅವಶ್ಯಕತೆಗಾಗಿ ಕುಟುಂಬದ ಕರ್ತನಿಗೆ ಮಾರಾಟ ಮಾಡುವಂತಹ ಅಧಿಕಾರ ವ್ಯಾಪ್ತಿ ಇರುತ್ತದೆ. ಎಲ್ಲಿಯೂ ಕೂಡ ವಾದಿಯು ತಾನು ಒಟ್ಟು ಕುಟುಂಬದ ಕರ್ತನಾಗಿ ಎಲ್ಲಾ ವ್ಯವಹರಣೆ ನೋಡಿಕೊಳ್ಳುವುದಾಗಿ ಖಂಡನೆ ತೆಗೆದುಕೊಂಡಿರುವುದಿಲ್ಲ ಮತ್ತು ಬ್ಯಾಂಕಿನ ಸಾಲದ ಹಣವನ್ನು ಅವರೇ ಪಾವತಿಸಿದ್ದಾರೆಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಯಾವುದೇ ಒಂದು ಕುಟುಂಬದ ಆಸ್ತಿಯು 3 ನೇ ವ್ಯಕ್ತಿಗೆ ಹಸ್ತಾಂತರವಾಗಿ 12 ವರ್ಷಗಳ ಮೇಲ್ಪಟ್ಟಿದ್ದಲ್ಲಿ ಆ ಆಸ್ತಿಯಲ್ಲಿ ಕುಟುಂಬದ ಸದಸ್ಯರಿಗೆ ಹಕ್ಕನ್ನು ಕೇಳುವಂತಹ ಯಾವುದೇ ಅಧಿಕಾರ ಇರುವುದಿಲ್ಲ.

39. ದಾವಾ ಐಟಂ ನಂ. 3 ರಲ್ಲಿ ಮಾರಾಟ ಮಾಡಿ ಉಳಿದ ಆಸ್ತಿಗಳು ಮೂಲತಃ ಉಗ್ರಪ್ಪನವರ ಆಸ್ತಿ ಎನ್ನುವ ಕುರಿತು ಯಾವುದೇ ತಕರಾರು ನ್ಯಾಯಾಲಯದ ಸಮಕ್ಷಮ ಇರುವುದಿಲ್ಲ .

40. ಐಟಂ ನಂ.4 ರ ಬಾಬ್ತು ವಾದಿಯು ನಿಪಿ.14 ನ್ನು ಹಾಜರುಪಡಿಸಿದ್ದು ನಿಪಿ.14 ರಿಂದ 18 ಸರ್ವೇ ನಂ.11/1 ರ ಪಹಣಿ ಪತ್ರಿಕೆಗಳಾಗಿದ್ದು ಆ ದಾಖಲಾತಿಯಲ್ಲಿ 7 ಎಕರೆ 10 ಗುಂಟೆ ಆಸ್ತಿಯು ಉಗ್ರಪ್ಪ ಬಿನ್ ದಾಸಪ್ಪ ಇವರ ಹೆಸರಿಗೆ ಇರುತ್ತದೆ. ಸರ್ವೇ ನಂ.20 ರಿಂದ 48 ರ ಆಸ್ತಿಗಳು ಸರ್ವೇ ನಂ.11/2 ರ ಪಹಣಿ ಪತ್ರಿಕೆಗಳಾಗಿದ್ದು ನಿಪಿ.49 ನ್ನು ಗಮನಿಸಿದಾಗ

ನಿಪಿ.49 ರಲ್ಲಿ ಸರ್ವೇ ನಂ.11/2 ವಿಸ್ತೀರ್ಣ 7 ಎಕರೆ 10 ಗುಂಟೆ ರಂಗಮ್ಮ ಕೋಂ ಲೇಟ್ ಲಕ್ಷ್ಮೀಪತಿ ಇವರಿಗೆ ಬದಲಾವಣೆಯಾದ ಬಗ್ಗೆ ನಮೂದು ಇರುತ್ತದೆ.

41. ಪಿ.ಡಬ್ಲ್ಯೂ.1 ರವರನ್ನು ಪಾಟೀ ಸವಾಲು ಮಾಡಿದಾಗ ಅವರು 7 ಎಕರೆ 10 ಗುಂಟೆ ತಮ್ಮದೇ ಎಂದು ನುಡಿದಿದ್ದು ಸಾಕ್ಷ್ಯವನ್ನು ಗಮನಿಸಿದಾಗ ಅವರಿಗೆ ಸಾಕ್ಷ್ಯ ನುಡಿಯುವ ಸಮಯದಲ್ಲಿ ವಯಸ್ಸು ಸುಮಾರು 80 ವರ್ಷಕ್ಕಿಂತ ಹೆಚ್ಚು ಮೀರಿರುವುದು ಕಂಡುಬರುತ್ತದೆ. ಸರ್ವೇ ನಂ.11/2 ಲಕ್ಷ್ಮೀಪತಿ ಹೆಂಡತಿ ರಂಗಮ್ಮನ ಹೆಸರಿನಲ್ಲಿ ಇದೆ ಎಂದು ಕಂಡುಬರುತ್ತದೆ. ರಂಗಮ್ಮ ಲಕ್ಷ್ಮೀಪತಿಯವರ ಹೆಂಡತಿಯನ್ನು ಕುರಿತು ಯಾವುದೇ ದಾಖಲಾತಿಗಳು ನ್ಯಾಯಾಲಯದ ಸಮಕ್ಷಮ ಇರುವುದಿಲ್ಲ. ನಿಪಿ.49 ನ್ನು ಗಮನಿಸಿದಾಗ ಮೂಲತಃ ಸರ್ವೇ ನಂ.11/2 ಲಕ್ಷ್ಮೀಪತಿಯವರ ಹೆಸರಿನಿಂದ ರಂಗಮ್ಮನ ಹೆಸರಿಗೆ ಬದಲಾವಣೆಯಾಗಿರುವುದು ಕಂಡುಬರುತ್ತದೆ.

42. ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುವ ಸಮಯದಲ್ಲಿ ಸರ್ವೇ ನಂ.11/2 ವಾದಿಯರ ಪಿತ್ರಾರ್ಜಿತ ಆಸ್ತಿ ಅಲ್ಲವೆಂದು ಖಂಡನೆಗೆ ತೆಗೆದುಕೊಂಡಿದ್ದು ಆದರೆ ನಿಡಿ.11 ಪ್ರತಿವಾದಿಯರು ಹಾಜರುಪಡಿಸಿದ ದಾಖಲಾತಿಯನ್ನು ಗಮನಿಸಿದಾಗ ಅದರಲ್ಲಿ ಐಟಂ.4 ರ ಆಸ್ತಿಯು ಸರ್ವೇ ನಂ.11/2 ವಿಸ್ತೀರ್ಣ 7 ಎಕರೆ 10 ಗುಂಟೆ ಎಂದು ನಮೂದು ಮಾಡಿರುವುದು ಕಂಡುಬರುತ್ತದೆ. ಆದ್ದರಿಂದ ಈ ದಾಖಲಾತಿಯ ಬಗ್ಗೆ ಹೆಚ್ಚು ವಿವರಣೆ ಅವಶ್ಯಕತೆ ಇರುವುದಿಲ್ಲ. ನಿಡಿ.1 ಹಕ್ಕು ಖುಲಾಸೆ ಪತ್ರವನ್ನು ಗಮನಿಸಿದಾಗ ಹಕ್ಕು ಖುಲಾಸೆ ಪತ್ರದಲ್ಲಿ ಅವರು ಒಟ್ಟು ಕುಟುಂಬದ ಸದಸ್ಯರೆಂದು ಒಪ್ಪಿರುವುದು ಕಂಡು ಬರುತ್ತದೆ . ಅಸಲು ದಾವೆ 33/2012 ರ ತೀರ್ಪು ನಿಡಿ.11 ನ್ನು ಗಮನಿಸಿದಾಗ ಅವರು ಆ ದಾವೆಯಲ್ಲಿ ಕಾಣಿಸಿದ ಆಸ್ತಿಗಳೆಲ್ಲವೂ ಪಿತ್ರಾರ್ಜಿತ ಆಸ್ತಿ ಮತ್ತು ಒಟ್ಟು ಕುಟುಂಬದ ಆಸ್ತಿಯೆಂದು ಒಪ್ಪಿಕೊಂಡಿದ್ದು ಆ

ದಾವೆಯ ವಾದಿಯರು ಈ ದಾವೆಯ ಪ್ರತಿವಾದಿ 1(ಡಿ) 1(ಬಿ) 1(ಸಿ) ಆಗಿರುತ್ತಾರೆ. ಆ ದಾವೆಯಲ್ಲಿ ಕಾಣಿಸಿದ ದಾವಾ ಆಸ್ತಿಯೇ ಈ ದಾವೆಯ ಶೆಡ್ಯೂಲ್ ಆಸ್ತಿಗಳಾಗಿರುತ್ತವೆ.

43. ವಾದಿಯು ಆ ಆಸ್ತಿಯ ಮೂಲ ಯಾವುದು ಹಾಗೂ ಉಗ್ರಪ್ಪ ಇವರಿಗೆ ಆ ಆಸ್ತಿಯು ಯಾವ ರೀತಿಯಾಗಿ ಬಂದಿರುವುದು ಎನ್ನುವ ಕುರಿತು ಯಾವುದೇ ರೀತಿಯಾದಂತಹ ವಿವರಣೆಯನ್ನು ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ ಮತ್ತು ಮೂಲತಃ ಉಗ್ರಪ್ಪನಿಗೆ ಆ ಆಸ್ತಿಗಳು ಯಾವ ನಾತೆಯಿಂದ ಬಂತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದರೆ ಮೂಲತಃ ದಾವಾಸ್ತಿ ಉಗ್ರಪ್ಪ ಇವರ ಆಸ್ತಿ ಎನ್ನುವ ಕುರಿತು ಯಾವುದೇ ತಕರಾರು ನ್ಯಾಯಾಲಯದ ಸಮಕ್ಷಮ ಇರುವುದಿಲ್ಲ ಹಾಗೂ ಉಗ್ರಪ್ಪ ಇವರು ತಮ್ಮ ಜೀವಿತಾ ಕಾಲದಲ್ಲಿ ದಾವಾ ಆಸ್ತಿಗಳನ್ನು ಯಾವುದೇ ರೀತಿಯ ವಿಲೇವಾರಿ ಮಾಡಿರುವುದಿಲ್ಲ, ಆದ್ದರಿಂದ ಐಟಂ ನಂ.3 ರಲ್ಲಿ ಸರ್ವೆ ನಂ.16/3 ರಲ್ಲಿ 3 ಎಕರೆ 14 ಗುಂಟೆ ಆಸ್ತಿಯನ್ನು ಹೊರತುಪಡಿಸಿ ಉಳಿದ ಆಸ್ತಿಗಳು ವಾದಿಯರ ಒಟ್ಟು ಕುಟುಂಬದ ಆಸ್ತಿಯೆಂದು ಪರಿಗಣಿಸಿ ವಿವಾದಾಂಶ–1 ನ್ನು ಭಾಗಶಃ ಸಕಾರಾತ್ಮಕವಾಗಿ ಹಾಗೂ ವಿವಾದಾಂಶ–2 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

44. **<u>ವಿವಾದಾಂಶ –3</u>** ವಾದಿಯು 1 ನೇ ಪ್ರತಿವಾದಿಯು 1(ಸಿ) ಪ್ರತಿವಾದಿಗೆ ದಾವಾ ಅನುಸೂಚಿ–1 ನ್ನು ಬರೆದುಕೊಟ್ಟಂತಹ ದಾನಪತ್ರವು ಅವರಿಗೆ ಬಂಧನಕಾರಿಯಾಗಿರುವುದಿಲ್ಲವೆಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ. ಪ್ರತಿವಾದಿಯವರು ನಿಡಿ–2 ನ್ನು ಹಾಜರುಪಡಿಸಿದ್ದು ಆ ನಿಡಿ–2 ರಲ್ಲಿ 1 ನೇ ಪ್ರತಿವಾದಿಯು ಅವರ ಮಗಳು ನಾಗವೇಣಿ ಇವರಿಗೆ ದಾನಪತ್ರವನ್ನು ಬರೆದುಕೊಟ್ಟಿರುವುದು ಕಂಡುಬಂದಿರುತ್ತದೆ, ಈಗಾಗಲೇ ವಿವಾದಂಶ –1 ರಲ್ಲಿ ವಿವರಿಸಿದಂತೆ ದಾವಾ ಶೆಡ್ಯೂಲ್ ಆಸ್ತಿ –

1 ವಾದಿ ಮತ್ತು 1 ನೇ ಪ್ರತಿವಾದಿಯ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ದಾನ ಪತ್ರವು ಪುರಾವೆಗೊಳ್ಳಬೇಕಾದಲ್ಲಿ ಯಾವುದಾದರೂ ಒಂದು ಸಾಕ್ಷಿದಾರರ ಸಾಕ್ಷವು ಅತ್ಯಾವಶ್ಯಕವಾಗಿರುತ್ತದೆ.

45. ದಾನ ಪತ್ರ ಕಾನೂನಿನ್ವಯ ಅನುಪ್ರಮಾಣಗೊಂಡಿದೆ ಎಂಬುದನ್ನು ಸಾಬೀತುಪಡಿಸಬೇಕಾದಲ್ಲಿ ಅನುಪ್ರಮಾಣಗೊಳಿಸಿರುವ ಒಬ್ಬನೇ ಸಾಕ್ಷಿಯು ಜೀವಂತವಾಗಿದ್ದರೆ ಮತ್ತು ನ್ಯಾಯಾಲಯದ ನಿರ್ದೇಶನಕ್ಕೆ ಒಳಪಡುವನಾಗಿದ್ದರೆ ಮತ್ತು ಅವನು ಸಾಕ್ಷ್ಯವನ್ನು ಕೊಡಲು ಸಮರ್ಥನಾಗಿದ್ದರೆ ಅದನ್ನು ಬರೆದು ಕೊಟ್ಟಿರುವುದನ್ನು ಸಾಬೀತು ಪಡಿಸುವುದಕ್ಕಾಗಿ ಸಾಕ್ಷಿಯನ್ನು ಕರೆಯಿಸುವವರೆಗೆ ಅದನ್ನು ಸಾಕ್ಷ್ಯವನ್ನಾಗಿ ಉಪಯೋಗಿಸತಕ್ಕದ್ದಲ್ಲ ಎಂಬುದಾಗಿರುತ್ತದೆ. ಅಲ್ಲದೇ ನಿಡಿ.2 ನ್ನು ಪುರಾವೆಗೊಳಿಸಲು ಪ್ರತಿವಾದಿಯವರು ಯಾವುದೇ ಅನುಪ್ರಮಾಣಿತ ಸಾಕ್ಷ್ಯದಾರರ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ ಮತ್ತು ನಿಡಿ.2 ನ್ನು ಪುರಾವೆಗೊಳಿಸಿರುವುದಿಲ್ಲ. ಆ ಆಸ್ತಿಯಲ್ಲಿ ವಾದಿಗಿರುವ ಹಕ್ಕನ್ನು ಯಾವುದೇ ವ್ಯಕ್ತಿಗೆ ಬೇರೆಯವರಿಗೆ ಬರೆದುಕೊಡುವಂತಹ ಯಾವುದೇ ಹಕ್ಕು ಇರುವುದಿಲ್ಲ. ಆದ್ದರಿಂದ ದಾನಪತ್ರವು ವಾದಿಯ ಹಿಸ್ಸೆಗೆ ಬಂಧನಕಾರಿಯಾಗಿರುವುದಿಲ್ಲ. ವಿವಾದಾಂಶ-3 ನ್ನು ಸಕಾರಾತ್ಮವಾಗಿ ಉತ್ತರಿಸಲಾಗಿದೆ.

**46. <u>ವಿವಾದಾಂಶ -4</u>** ಃ ಪ್ರತಿವಾದಿ 1(ಎ)ರಿಂದ 1(ಸಿ) ಪ್ರತಿವಾದಿಯರು 1978 ರಲ್ಲಿ ಭಾಗ ಆಗಿದೆ ಎಂದು ಖಂಡನೆ ತೆಗೆದುಕೊಂಡಿದ್ದು, ಡಿ.ಡಬ್ಲ್ಯೂ -1 ತಮ್ಮ ಪಾಟೀ ಸವಾಲಿನಲ್ಲಿ ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು ಅವರ ತಂದೆ ಸಾಲ ತೀರಿಸಿದ್ದರಿಂದ ಅವರ ದೊಡ್ಡಪ್ಪ ಬಿಟ್ಟು ಹೋಗಿದ್ದು, ಅವರ ತಂದೆ 1978 ರಿಂದ ಸ್ವಾ ಧೀನದಲ್ಲಿದ್ದಾರೆಂದು, ದಾವಾ ಆಸ್ತಿಗಳು ಅವರ ತಂದೆಯ ಹೆಸರಿಗೆ ಬರುವ ಪೂರ್ವದಲ್ಲಿ ಅವರ ತಾತನ ಹೆಸರಿನಲ್ಲಿತ್ತು

ಎಂದು, ಅವರ ದೊಡ್ಡಪ್ಪ ತಂದೆಯ ಹೆಸರಿಗೆ ಬರೆದುಕೊಟ್ಟ ದಾಖಲಾತಿಗಳು ಸಿವಿಲ್ ನ್ಯಾಯಾಲಯದಲ್ಲಿ ಇರುತ್ತವೆಂದು ಸಿವಿಲ್ ನ್ಯಾಯಾಲಯದಲ್ಲಿರುವ ದಾಖಲೆಯನ್ನು ಈ ನ್ಯಾಯಾಲಯಕ್ಕೆ ತಂದು ಹಾಜರುಪಡಿಸಲು ತೊಂದರೆ ಇಲ್ಲವೆಂದು ನುಡಿದಿರುತ್ತಾರೆ. ಇದನ್ನು ಗಮನಿಸಿದಾಗ ಅವರ ಪ್ರಕಾರ ಲಿಖಿತವಾಗಿ ಪಾಲು ವಿಭಾಗವಾಗಿದೆ ಎಂಬುದಾಗಿದ್ದು ಆದರೆ ಯಾವುದೇ ವಿಭಾಗ ಪತ್ರವನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವುದಿಲ್ಲ, 1 ನೇ ಪ್ರತಿವಾದಿಯ ವಾರಸುದಾರರು ಯಾವ ದಿನಾಂಕದಂದು ಮೌಖಿಕ ವಿಭಾಗವಾಗಿದ್ದು, ಆ ಸಮಯದಲ್ಲಿ ಯಾರೆಲ್ಲಾ ಹಾಜರಿದ್ದರು ಮತ್ತು ಆ ಆಸ್ತಿಗಳ ಬಗ್ಗೆ ಏನೇನು ಮಾತುಕತೆಯಾಯಿತು ಎನ್ನುವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಹಾಗೂ ವಿಭಜನೆಯ ಬಗ್ಗೆ ಯಾವುದೇ ಸಾಕ್ಷಿದಾರರ ಸಾಕ್ಷ್ಯವನ್ನು ಸಹ ಮಾಡಿಸಿರುವುದಿಲ್ಲ ಮತ್ತು ವಿಭಜನೆಯ ಆಧಾರದ ಮೇಲೆ ದಾಖಲಾತಿಯಲ್ಲಿ ಹೆಸರು ಬದಲಾವಣೆ ಆದ ಕುರಿತು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ-13 ನ್ನು ಗಮನಿಸಿದಾಗ ನಿಪಿ.13 ರಲ್ಲಿ ಉಪವಿಭಾಗಾಧಿಕಾರಿಯವರು ಕಡತದಲ್ಲಿ ಲಭ್ಯವಿರುವಂತಹ ಖುಲಾಸೆ ಪತ್ರವು ನಂಬಲರ್ಹವಾದ ದಾಖಲಾತಿಯಾಗಿರುವುದಿಲ್ಲ. ಸದರಿ ದಾಖಲಾತಿ ನೋಂದಾವಣಿ ಆಗಿರುವುದಿಲ್ಲವೆಂದು ಆದ್ದರಿಂದ ಉಪ ತಹಶೀಲ್ದಾರರು ಮಾಡಿರುವ ಪ್ರಶ್ನಿತ ಆದೇಶವು ನ್ಯಾಯ ಸಮ್ಮತವಾಗಿರುವುದಿಲ್ಲವೆಂದು ನಾಡಕಛೇರಿಯ ಉಪತಹಶೀಲ್ದಾರರು ದಿ09.10.1992 ರಂದು ಖಾತೆ ಬದಲಾವಣೆ ಮಾಡಿದಂತಹ ಆದೇಶವನ್ನು ತಳ್ಳಿ ಹಾಕಿರುವುದು ಕಂಡು ಬರುತ್ತದೆ. ಆ ಆದೇಶ ರದ್ದುಪಡಿಸಿಕೊಂಡಿರುವ ಕುರಿತು ಯಾವ ದಾಖಲಾತಿಗಳನ್ನು ಪ್ರತಿವಾದಿಯವರು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಪ್ರತಿವಾದಿಯವರು 15.01.1978 ರಂದು

ವಿಭಾಗವಾಗಿದೆ ಎಂದು ಪುರಾವೆಗೊಳಿಸಲು ವಿಫಲರಾಗಿದ್ದಾರೆಂದು ಪರಿಗಣಿಸಿ ಮೇಲೆ ವಿವರಿಸಿದ ಕಾರಣಗಳಿಂದ ವಿವಾದಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

. 47. **ವಿವಾದಾಂಶ–5ಃ–** ವಿವಾದಾಂಶ–1 ರಲ್ಲಿ ವಿವರಿಸಿದಂತೆ ದಾವಾ ಶೆಡ್ಯೂಲ್ ಐಟಂ ನಂ.1 ಮತ್ತು 4 ವಾದಿ ಮತ್ತು ಪ್ರತಿವಾದಿಯವರ ಜಂಟಿ ಕುಟುಬಂದ ಆಸ್ತಿ ಎಂದು ಹಾಗೂ ಐಟಂ ನಂ.3 ರಲ್ಲಿ 3 ಎಕರೆ 14 ಗುಂಟೆ ಹೊರತು ಪಡಿಸಿ ಉಳಿದ ಆಸ್ತಿಯಲ್ಲಿ ವಾದಿ ಮತ್ತು 1 ನೇ ಪ್ರತಿವಾದಿಯವರ ಒಟ್ಟು ಕುಟುಂಬದ ಆಸ್ತಿಯೆಂದು ಪರಿಗಣಿಸಲಾಗಿರುತ್ತದೆ. ಪ್ರತಿವಾದಿಯವರು ಉಗ್ರಪ್ಪರವರಿಗೆ ಬೇರೆ ಮಕ್ಕಳಿದ್ದಾರೆ ಎಂದು ಎಲ್ಲಿಯೂ ಕೂಡ ತನ್ನ ಪ್ರತಿವಾದ ಪತ್ರದಲ್ಲಿ ಖಂಡನೆಗೆ ತೆಗೆದುಕೊಂಡಿರುವುದಿಲ್ಲ . ಆದರೂ ಕೂಡ ಪ್ರತಿವಾದಿ ಪರ ವಕೀಲರು ವಾದಿಯನ್ನು ಪಾಟೀ ಸವಾಲು ಮಾಡಿದಾಗ ವಾದಿಗೆ ಪಾರ್ವತಮ್ಮ ಮತ್ತು ಜಾನಕಮ್ಮ ಎನ್ನುವ ಅಕ್ಕರಿದ್ದಾರೆಂದು ಸೂಚಿಸಿರುವುದು ಕಂಡು ಬರುತ್ತದೆ . ವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುವಾಗ ಅವರುಗಳು ಸ್ವಂತ ಅಕ್ಕ ಎನ್ನುವ ಬಗ್ಗೆ ಪ್ರತಿವಾದಿಯವರು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ವಾದವನ್ನು ಮಂಡಿಸಿರುತ್ತಾರೆ. ಆದರೆ ಯಾವುದೇ ಒಬ್ಬ ವ್ಯಕ್ತಿಯು ಬೇರೆ ರೀತಿಯಾಗಿ ಸಂಬಂಧದಲ್ಲಿ ಅಕ್ಕ ಆಗುವವರರನ್ನು ಅಕ್ಕ ಎಂದು ಸೂಚಿಸಲು ಸಾಧ್ಯವಿಲ್ಲ ಮತ್ತು ಯಾವುದೇ ವ್ಯಕ್ತಿ ಕೂಡ ಅವರನ್ನು ಅಕ್ಕ ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ . ಪಾಟೀ ಸವಾಲನ್ನು ಗಮನಿಸಿದಾಗ ವಾದಿಯು ಸ್ವಂತ ಅಕ್ಕ ಎಂದೇ ಒಪ್ಪಿಕೊಂಡಿರುವಂತೆ ಕಂಡು ಬರುತ್ತದೆ .

48. ನಿಡಿ.1 ರಲ್ಲಿ 2023 ರಲ್ಲಿ ಸುನಂದ ಅಂದರೆ 1(ಇ) ಪ್ರತಿವಾದಿಯವರು ಸರ್ವೆ ನಂ.13/3 ರಲ್ಲಿ 3 ಎಕರೆ ಜಂಟಿ ಖಾತೆಯಲ್ಲಿರುವ ಸ್ವತ್ತಿಗೆ ಸಂಬಂದಪಟ್ಟಂತೆ 1(ಬಿ) ಧನಲಕ್ಷಿ ಯವರಿಗೆ ವಹಿಸಿಕೊಟ್ಟು ಒಟ್ಟು ಕುಟುಂಬದಿಂದ ಖುಲಾಸೆ ಹೊಂದಿರುತ್ತಾರೆಂದು

ಉಲ್ಲೇಖವಿರುತ್ತದೆ ಹಾಗೂ ಅವರ ದಿವಂಗತ ಪತಿಯವರಿಗೆ ಸೇರಬೇಕಾದ ಎಲ್ಲಾ ಸ್ಥಿರ ಮತ್ತು ಚರ ಆಸ್ತಿಗಳಿಗೆ ಸಂಬಂದಪಟ್ಟಂತೆ ಅವರ ಹಕ್ಕುಗಳನ್ನು ಬಿಟ್ಟು ಕೊಟ್ಟು ರೂ.2,50,000/- ಗಳನ್ನು ಪಡೆದುಕೊಂಡು ಹಕ್ಕು ಖುಲಾಸೆ ಪತ್ರವನ್ನು ಬರೆದು ಕೊಟ್ಟಿರುತ್ತಾರೆ ಎಂದು ಉಲ್ಲೇಖವಿರುತ್ತದೆ . ಪ್ರತಿವಾದಿ 2(ಇ) ಪರವಾಗಿ ವಕೀಲರು ಹಾಜರಾಗಿದ್ದರೂ ಕೂಡ ಅವರು ಪ್ರತ್ಯೇಕವಾಗಿ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಮತ್ತು ತಾನು ಹಕ್ಕು ಖುಲಾಸೆ ಪತ್ರವನ್ನು ಬರೆದು ಕೊಟ್ಟಿಲ್ಲ ಎಂದು ಖಂಡನೆಯನ್ನು ತೆಗೆದು ಕೊಂಡಿರುವುದಿಲ್ಲ. ನಿಡಿ.1 ನೊಂದಾಯಿತ ಹಕ್ಕು ಖುಲಾಸೆ ಪತ್ರವಾಗಿರುತ್ತದೆ.

49. ಹಿಂದೂ ಉತ್ತರಾಧಿಕಾರಿ ನಿಯಮದ ಕಲಂ-6 ರಲ್ಲಿ ಈ ಕೆಳಗಿನಂತೆ ಉಲ್ಲೇಖ ಇರುತ್ತದೆ.

> 6. ಸಹಭಾಗಿತ್ವದ ಆಸ್ತಿಯಲ್ಲಿ ಹಸ್ತಾಂತರದ ಆಸಕ್ತಿ (Devolution of interest in coparcenary property).- (1) ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಅಧಿನಿಯಮ, 2005ರ ಪ್ರಾರಂಭದ ದಿನದಂದು ಮತ್ತು ದಿನದಿಂದ ಮಿತಾಕ್ಷರ ಕಾಯಿದೆಯಡಿಯಲ್ಲಿ ನಿರ್ವಹಿಸಲ್ಪಡುವಂತಹ ಅವಿಭಕ್ತ ಹಿಂದೂ ಕುಟುಂಬದಲ್ಲಿ ಸಹಭಾಗಿಯ ಮಗಳು.-
>
> (ಎ) ಮಗನ ರೀತಿಯಲ್ಲಿಯೇ ಹುಟ್ಟಿನಿಂದಲೇ ತನ್ನದೇ ಸಹಭಾಗಿಯಾಗಿ ತನ್ನದೇ ಹಕ್ಕನ್ನು ಹೊಂದಿರುವಳುಃ
>
> (ಬಿ) ಒಂದು ವೇಳೆ ಆಕೆಯು ಮಗನಾಗಿ ಹುಟ್ಟಿದ್ದರೆ ಹೊಂದಿರುತ್ತಿದ್ದ ಹಕ್ಕನ್ನೇ ಸಹಭಾಗಿತ್ವದ ಆಸ್ತಿಯ ಮೇಲೆ ಹೊಂದಿರುವಳುಃ

(ಸಿ) ಸದರಿ ಸಹಭಾಗಿತ್ವದ ಆಸ್ತಿಯ ಸಂಬಂಧದಲ್ಲಿ ಮಗನು ಹೊಂದಿರುವಂತಹ ಹೊಣೆಗಾರಿಕೆಯನ್ನೆ ಹೊಂದಿರುವಳು ಮತ್ತು ಹಿಂದೂ ಮಿತಾಕ್ಷರ ಸಹಭಾಗಿತ್ವದ ಆಸ್ತಿಯ ಮೇಲಿನ ಯಾವುದೇ ಉಲ್ಲೇಖವು ಸದರಿ ಸಹಭಾಗಿತ್ವದ ಮಗಳನ್ನೂ ಸಹ ಸೇರಿಸಿ ಉಲ್ಲೇಖಿಸಲಾಗಿದೆಯೆಂದು ಪರಿಭಾವಿಸತಕ್ಕದ್ದುಃ

ಪರಂತು ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ ಸಹ ಯಾವುದೇ ಪಾಲು ಹಂಚಿಕೆ ಅಥವಾ ಪರಭಾರೆಯನ್ನು ಯಾವುದೇ ಪಾಲುದಾರಿಕೆಯನ್ನು ಅಥವಾ ಆಸ್ತಿಯ ಮರಣ ಶಾಸನ ರಹಿತ ಪಾಲುದಾರಿಕೆಯು ದಿನಾಂಕ 20 ನೇ ಡಿಸೆಂಬರ್, 2004 ರ ಪೂರ್ವದಲ್ಲಿ ಏರ್ಪಟ್ಟಿದ್ದಲ್ಲಿ ಬಾಧಕವಾಗತಕ್ಕದ್ದಲ್ಲ ಅಥವಾ ಅನೂರ್ಜಿತಗೊಳಿಸತಕ್ಕದ್ದಲ್ಲ.

50. ದಾವಾ ಐಟಂ ನಂ.1 ಮತ್ತು 4 ವಾದಿ ಮತ್ತು ಪ್ರತಿವಾದಿಯವರ ಜಂಟಿ ಕುಟುಂಬದ ಆಸ್ತಿ ಎಂದು ಹಾಗೂ ಐಟಂ ನಂ.3 ರಲ್ಲಿ 3 ಎಕರೆ 14 ಗುಂಟೆ ಹೊರತು ಪಡಿಸಿ ಉಳಿದ ಆಸ್ತಿಯಲ್ಲಿ ವಾದಿ ಮತ್ತು 1 ನೇ ಪ್ರತಿವಾದಿಯವರ ಒಟ್ಟು ಕುಟುಂಬದ ಆಸ್ತಿಯೆಂದು ಪರಿಗಣಿಸಲಾಗಿರುತ್ತದೆ. ಆದ್ದರಿಂದ ಐಟಂ.3 ರಲ್ಲಿ 3 ಎಕರೆ 14 ಗುಂಟೆ ಹೊರತು ಪಡಿಸಿ ಉಳಿದ ಐಟಂ ನಂ.1 ಮತ್ತು 4 ನೇ ಆಸ್ತಿಯಲ್ಲಿ ವಾದಿಗೆ ¼ ಅಂಶ ಮತ್ತು 1 ನೇ ಪ್ರತಿವಾದಿಯ ವಾರಸುದಾರರಿಗೆ ¼ ಅಂಶ ಆದರೆ ಪ್ರತಿವಾದಿ 1(ಇ) ರವರು ತಮ್ಮ ಹಕ್ಕನ್ನು 1(ಬಿ ) ರವರಿಗೆ ನಿಡಿ.1 ರಂತೆ ಹಕ್ಕು ಖುಲಾಸೆ ಪತ್ರ ಬರೆದು ಕೊಟ್ಟಿರುವುದು ಕಂಡು ಬರುತ್ತದೆ. ಆ ದಾಖಲಾತಿಯ ಬಗ್ಗೆ ಯಾರೂ ಕೂಡ ತಕರಾರು ಮಾಡಿರುವುದಿಲ್ಲ. ಆದ್ದರಿಂದ ಆ ಹಕ್ಕು ಖುಲಾಸೆ ಪತ್ರದ ಪ್ರಕಾರ ಅವರ ಹಿಸ್ಸೆಗೆ ಬಂದ ಆಸ್ತಿಯಲ್ಲಿ ಪ್ರತಿವಾದಿ 1(ಬಿ) ಇವರಿಗೆ ಹಕ್ಕು ಇರುತ್ತದೆ. ಈ ಅಂಶವನ್ನು ಅಂತಿಮ ಡಿಕ್ರಿಯಲ್ಲಿ ಪರಿಗಣಿಸಬಹುದಾಗಿದೆ ಉಳಿದ ವಾರಸುದಾರರಿಗೆ ಒಟ್ಟಾಗಿ ¼ ಅಂಶ ಹಿಸ್ಸೆ ಮತ್ತು ಪಾರ್ವತಮ್ಮನವರ ಶಾಖೆಗೆ ¼ ನೇ ಅಂಶ

ಮತ್ತು ಜಾನಕಮ್ಮನವರ ಶಾಖೆಗೆ ¼ ನೇ ಅಂಶ ಹಿಸ್ಸೆ ಇದೆಯೆಂದು ಪರಿಗಣಿಸಲಾಗಿದೆ . ಆದ್ದರಿಂದ ಮೇಲೆ ವಿವರಿಸಿದ ಕಾರಣಗಳಿಂದ ವಿವಾದಾಂಶ-5 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ .

51. **ವಿವಾದಾಂಶ-6ಃ-** ವಾದಿಯು ಈ ದಾವೆಯನ್ನು ಪ್ರತಿವಾದಿಯವರ ವಿರುದ್ಧ ದಾವಾ ಆಸ್ತಿಯಲ್ಲಿ ವಿಭಜನೆ ಕೋರಿ ಸಲ್ಲಿಸಿರುವುದರಿಂದ, ಖರ್ಚು ವಿಧಿಸುವುದು ಸೂಕ್ತವಲ್ಲವೆಂದು ತೀರ್ಮಾನಕ್ಕೆ ಬಂದು, ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**ಆದೇಶ**

ವಾದಿಯ ದಾವೆಯನ್ನು ಭಾಗಶಃ ಡಿಕ್ರಿ ಮಾಡಲಾಗಿದೆ.

ದಾವಾ ಅನುಸೂಚಿ ಸ್ವತ್ತು ಐಟಂ ನಂ.1 ಮತ್ತು 4 ರಲ್ಲಿ ಮತ್ತು ದಾವಾ ಅನುಸೂಚಿ ಐಟಂ ನಂ.3 ರಲ್ಲಿ 3 ಎಕರೆ 14 ಗುಂಟೆಯನ್ನು ಹೊರತುಪಡಿಸಿ ಉಳಿದ ಆಸ್ತಿಯಲ್ಲಿ ವಾದಿಗೆ ¼ ನೇ ಅಂಶ ಪ್ರತಿವಾದಿ ಲಕ್ಷ್ಮೀಪತಿಯವರ ವಾರಸುದಾರರಿಗೆ 1/4 ನೇ ಅಂಶ ಹಿಸ್ಸೆ ಇದೆ (ಪ್ರತಿವಾದಿ 1(ಇ) ರವರು ತಮ್ಮ ಹಿಸ್ಸೆಯನ್ನು ಪ್ರತಿವಾದಿ 1(ಬಿ) ರವರಿಗೆ ಹಕ್ಕು ಖುಲಾಸೆ ಪತ್ರದ ಪ್ರಕಾರ ಬಿಟ್ಟು ಕೊಟ್ಟಿರುವುದರಿಂದ ಅವರ ಹಿಸ್ಸೆಯನ್ನು 1(ಬಿ) ರವರಿಗೆ ನೀಡತಕ್ಕದ್ದು)ಹಾಗೂ ಪಾರ್ವತಮ್ಮ ಮತ್ತು ಜಾನಕಮ್ಮ ರವರ ಶಾಖೆಗೆ ತಲಾ ¼ ನೇ ಅಂಶ ಹಿಸ್ಸೆ ಇದೆ ಎಂದು ತೀರ್ಮಾನಿಸಲಾಗಿದೆ.

ವಾದಿಯು ದಾವಾ ಅನುಸೂಚಿ ಸ್ವತ್ತುಗಳಲ್ಲಿ ¼ ನೇ ಅಂಶ ಹಿಸ್ಸೆಯನ್ನು ಪ್ರತ್ಯೇಕಿಸಿ ಮತ್ತು ಕಬ್ಜೆ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ಇದೇ ರೀತಿ ಪ್ರಾಥಮಿಕ ಡಿಕ್ರಿ ಬರೆಯಿರಿ.

ದಿನಾಂಕಃ 13.06.2022ರ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪು – 2022 SCC online SC 737 (Kattukandi Edathil Krishnan V/s Kattukandi Edathil Valsan) ಪ್ರಕಾರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ XX ನಿಯಮ 18ರ ಅಡಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲು ವಿಷಯವನ್ನು ಪಟ್ಟಿ ಮಾಡತಕ್ಕದ್ದು.

ಸಿ.ಐ.ಎಸ್. ನಲ್ಲಿನ ತಾಂತ್ರಿಕತೆಗಳನ್ನು ತಪ್ಪಿಸುವ ಸಲುವಾಗಿ ಹೊಸ ಸಂಖ್ಯೆಯನ್ನು ನೀಡುವುದರ ಮೂಲಕ ಎಫ್.ಡಿ.ಪಿ. ಎಂದು ನೋಂದಾವಣೆ ಮಾಡಲು ಕಛೇರಿಗೆ ನಿರ್ದೇಶಿಸಿದೆ.

ಎಫ್.ಡಿ.ಪಿ. ಪ್ರಕರಣವನ್ನು ನ್ಯಾಯಾಲಯದಲ್ಲಿ ದಿನಾಂಕಃ 31.07.2026 ರಂದು ಕರೆಯತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕಃ 02 ನೇ ಮೇ –2026 ರಂದು ಉದ್ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

## ಅನುಬಂಧ

**I ವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ**

ಪಿ.ಡಬ್ಲ್ಯೂ-1 ಃ ಹೇಮರೆಡ್ಡಿ

**II ವಾದಿಯರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ**

ನಿ.ಪಿ– 1 ರಿಂದ 3 ಃ ಪಹಣಿ ಪತ್ರಿಕೆ ಧೃಡೀಕೃತ ನಕಲುಗಳು.

ನಿ.ಪಿ–4 ಃ ಐಹೆಚ್‌ಸಿ ಆದೇಶದ ದೃಢೀಕೃತ ನಕಲು

| | | |
|---|---|---|
| ನಿ.ಪಿ–5 | ಃ | ಸರ್ವೆ ನಂಬರ್ 16/1 ರ ಪಹಣಿ ಪತ್ರಿಕೆ. |
| ನಿ.ಪಿ–6 | ಃ | ಸರ್ವೆ ನಂಬರ್ 16/2 ರ ಪಹಣಿ ಪತ್ರಿಕೆ. |
| ನಿ.ಪಿ–7 | ಃ | ಸರ್ವೆ ನಂಬರ್ 16/3 ರ ಪಹಣಿ ಪತ್ರಿಕೆ. |
| ನಿ.ಪಿ–8 | ಃ | ಕ್ರಯ ಪತ್ರದ ದೃಢೀಕೃತ ನಕಲು |
| ನಿ.ಪಿ–9 | ಃ | ದಾನ ಪತ್ರದ ದೃಢೀಕೃತ ನಕಲು |
| ನಿ.ಪಿ–10 | ಃ | ಎಂಆರ್ ನಂ. 2/98–99 ರ ದೃಢೀಕೃತ ನಕಲು |
| ನಿ.ಪಿ–11 | ಃ | ಎಂಆರ್ ನಂ. 3/98–99 ರ ದೃಢೀಕೃತ ನಕಲು |
| ನಿ.ಪಿ–12 | ಃ | ಎಂಆರ್ ಹೆಚ್ 7 ರ ಆದೇಶದ ಪ್ರತಿ |
| ನಿ.ಪಿ–13 | ಃ | ಆರ್.ಎ 63/92–93 ರಲ್ಲಿ ಉಪವಿಭಾಗಧಿಕಾರಿ ಮಾಡಿದ ಆದೇಶದ ಧೃಡೀಕೃತ ನಕಲು |
| ನಿ.ಪಿ–14 ರಿಂದ 18 | ಃ | ಸರ್ವೆ ನಂ.**11/1** ರ ಪಹಣಿ ಪತ್ರಿಕೆಗಳು |
| ನಿ.ಪಿ–19 ರಿಂದ 25 | ಃ | ಸರ್ವೆ ನಂ.11/2 ರ ಪಹಣಿ ಪತ್ರಿಕೆಗಳು |
| ನಿ.ಪಿ–26 ರಿಂದ 48 | ಃ | ಸರ್ವೆ ನಂ.11/2 ರ ಕಂಪ್ಯೂಟರೈಸ್ಡ್ ಪಹಣಿ ಪತ್ರಿಕೆಗಳು |
| ನಿ.ಪಿ–49 | ಃ | ಎಂ ಆರ್ ಹೆಚ್ –2 ರ ಪ್ರತಿ |

## III ಪ್ರತಿವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ

| | | |
|---|---|---|
| ಡಿ.ಡಬ್ಲ್ಯೂ–1 | ಃ | ನಾಗವೇಣಿ |
| ಡಿ.ಡಬ್ಲ್ಯೂ–2 | ಃ | ಕೆಂಚಮ್ಮ |

## IV ಪ್ರತಿವಾದಿಯರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ

| | | |
|---|---|---|
| ನಿ.ಡಿ–1 | ಃ | ಹಕ್ಕು ಖುಲಾಸೆ ಪತ್ರದ ಧೃಢೀಕೃತ ನಕಲು |
| ನಿ.ಡಿ–2 | ಃ | ದಾನಪತ್ರದ ಮೂಲ ಪ್ರತಿ |
| ನಿ.ಡಿ–2(ಎ) | ಃ | ಲಕ್ಷ್ಮೀಪತಿಯಪ್ಪನವರ ಸಹಿ |
| ನಿ.ಡಿ–3 | ಃ | ದಿಃ**15.10.1998** ರ ಕ್ರಯ ಪತ್ರದ ದೃಢಿಕೃತ ನಕಲ |
| ನಿ.ಡಿ–4 | ಃ | ಮ್ಯುಟೇಷನ್ ರಿಜಿಸ್ಟರ್ ಪ್ರತಿ |
| ನಿ.ಡಿ–5 | ಃ | ರಶೀದಿ ಪಟ್ಟಾ |
| ನಿ.ಡಿ–6 ಮತ್ತು 7 | ಃ | ಸರ್ಕಾರಿ ಬಾಕಿ ಪಾವತಿಯ ರಶೀದಿಗಳು |
| ನಿ.ಡಿ–**8** ಮತ್ತು **9** | ಃ | ಸರ್ವೆ ನಂ.**16/5** ರ ಪಹಣಿ ಪತ್ರಿಕೆಗಳು |

| | | |
|---|---|---|
| ನಿ.ಡಿ–10 | ः | ಗ್ರಾಮ ನಮೂನೆ ಸಂಖ್ಯೆ 1 |
| ನಿ.ಡಿ–11 ಮತ್ತು 12 | ः | ಓಎಸ್ ನಂ.33/2012 ರ ತೀರ್ಪು ಮತ್ತು ಡಿಕ್ರಿ ಪ್ರತಿಗಳು |
| ನಿ.ಡಿ–13 | ः | ಓಎಸ್ ನಂ.150/2013 ರ ಆದೇಶ ಪುಟದ ಧೃಢೀಕೃತ ನಕಲು |
| ನಿ.ಡಿ–14 | ः | ಓಎಸ್ ನಂ.150/2013 ರ ವಾದ ಪತ್ರದ ಧೃಢೀಕೃತ ನಕಲು |
| ನಿ.ಡಿ–15 | ः | ಓಎಸ್ ನಂ.150/2013 ರ ಪ್ರತಿವಾದ ಪತ್ರದ ಧೃಢೀಕೃತ ನಕಲು |

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

Visit ecourts.gov.in for updates or download mobile app "eCourts Services" from Android or iOS

SUJATHA SUVARNA B
Digitally signed by SUJATHA SUVARNA B
Date: 2026.05.06 18:24:55 +0530